IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಗಿರೀಶ್ ಕಾರ್ನಾಡರ ತಲೆದಂಡ ನಾಟಕದ ತಾತ್ವಿಕ ವಿಶ್ಲೇಷಣೆ

ಡಾ. ಕೃಷ್ಣೋಜಿರಾವ್ ಟಿ. ಎಂ.

ತಿಮ್ಮಸಂದ್ರ, ತರಹುಣಿಸೆ ಅಂಚೆ, ಬೆಂಗಳೂರು ಉತ್ತರ ತಾಲೂಕು–೫೬೨೧೫೭.

**ಪೀಠಿಕೆ :**

ಹನ್ನೆರಡನೆಯ ಶತಮಾನ ಕಂಡ ಒಂದು ಮಹಾನ್ ಚೇತನ ಬಸವಣ್ಣ. ವೇದ ಪೂರ್ವ ಕಾಲದಿಂದಲೂ ನಡೆದುಕೊಂಡು ಬಂದಿರುವ, ಇಂದಿಗೂ ಆಚರಣೆಯಲ್ಲಿರುವ ಸ್ಪೃಶ್ಯ ಮತ್ತು ಅಸ್ಪೃಶ್ಯದ ಆಚರಣೆಯಲ್ಲಿ ನಲುಗಿ ಹೋಗಿರುವ ದಮನಿತ ಜಾತಿಗಳು ಮೇಲ್ಜಾತಿಗಳ ತುಳಿತಕ್ಕೆ ಒಳಗಾದಾಗ ಅದರಿಂದ ಮುಕ್ತಿ ಪಡೆಯುವ ಪರಿಹಾರೋಪಾಯದ ಹುಡುಕಾಟದ ಅನಿವಾರ್ಯತೆ ಮುಖ್ಯವಾಗಿತ್ತು. ಇಂಥಹ ಸಂದರ್ಭದಲ್ಲಿ ಬಂದ ಒಂದು ಉಪಾಯ ಅಂತರ್ಜಾತಿ ವಿವಾಹ.

ಅಂತರ್ಜಾತಿ ವಿವಾಹ ಕಾರಣವಾಗಿಯೇ ಇಡೀ ವ್ಯವಸ್ಥೆಯಲ್ಲಿ ಅಲ್ಲೋಲ ಕಲ್ಲೋಲಗಳಾದವು. ಹೀಗೆ ಕೆಳಜಾತಿಯವರ ಮೇಲಾದ ಶೋಷಣೆಯನ್ನು ಕುರಿತೇ ಅನೇಕರು ಬಸವಣ್ಣನನ್ನು ಕುರಿತು ನಾಟಕಗಳನ್ನು ಬರೆಯತೊಡಗಿದರು, ಅವುಗಲಲ್ಲಿ ಮುಖ್ಯವಾಗಿ ; ಗಿರೀಶ್ ಕಾರ್ನಾಡರ– ತಲೆದಂಡ ; ಲಂಕೇಶರ –ಸಂಕ್ರಾಂತಿ ; ಚಂದ್ರಶೇಖರ ಕಂಬಾರರ– ಶಿವರಾತ್ರಿ ; ಶಿವಪ್ರಕಾಶರ –ಮಹಾಚೈತ್ರ ; ಕಲ್ಬುರ್ಗಿಯವರ– ಕಟ್ಟಿತ್ತು ಕಲ್ಯಾಣ ; ಅ.ನ.ಕೃಷ್ಣರಾಯರ– ಜಗಜ್ಜಯೋತಿ ಬಸವೇಶ್ವರ ಇವೇ ಮೊದಲಾದವುಗಲನ್ನು ಕಾಣಬಹುದು.

ಎಲ್ಲಾ ನಾಟಕಕಾರರಿಗೂ ಮೂಲ ವಸ್ತು ಮಾತ್ರ ಶೋಷಣೆ, ಅದರಲ್ಲೂ ದಲಿತ ವರ್ಗದವರ ಮೇಲಾಗುತ್ತಿದ್ದ ಶೋಷಣೆಯಾಗಿದೆ. ಆದರೆ ಅದನ್ನೂ ಮೀರಿದ ಶೋಷಣೆಗಳ ಹುಡುಕಾಟವನ್ನು ನಾವಿಲ್ಲಿ ಕಾಣಬಹುದು. ಉದಾಹರಣೆಗೆ, ಮೇಲ್ಜಾತಿಯವರೇ ಮೇಲ್ಜಾತಿಯವರನ್ನು ಶೋಷಿಸುವುದು, ಮಗನಾದವನು ಅಪ್ಪ–ಅಮ್ಮನನ್ನೇ ಶೋಷಿಸುವುದು, ಇತ್ಯಾದಿಯಾಗಿ ಗುರ್ತಿಸಬಹುದು.

ತಲೆದಂಡ ನಾಟಕದಲ್ಲಿ ತಲೆದಂಡವಾಗುವುದು ದಲಿತ ಜಾತಿಯವರಿಗೋ ಅಥವಾ ತಮ್ಮ ಮಕ್ಕಳಿಗೆ ಅಂತರ್ಜಾತಿ ವಿವಾಹ ಮಾಡಿಸಿದ ತಂದೆ ತಾಯಿಗಳಿಗೋ, ಅಥವಾ ವ್ಯವಸ್ಥೆಯನ್ನು ಸರಿದಾರಿಗೆ ತರಲು ಹೊರಟ ರಾಜ ಬಿಜ್ಜಳನ್ನು ಕೊಂದ ಶರಣರ ಅಟ್ಟಹಾಸವೋ ? ಅದರ ಆವಿಷ್ಕಾರ ನಡೆಯಬೆಕಾದುದು ಜರೂರಾಗಿದೆ.

ನಾಟಕ ಆರಂಭವಾಗುದೇ ಸಾಂಭಶಿವಶಾಸ್ತ್ರಿಗಳ ಮನೆಯಿಂದ, ಅನಾರೋಗ್ಯಕ್ಕೆ ತುತ್ತಾದ ಶಾಸ್ತ್ರಿಗಳಿಗೆ ಜಾತಿ, ಮಡಿ, ಮೈಲಿಗೆ ಎಂದರೆ ಎಲ್ಲಿಲ್ಲದ ಶ್ರದ್ಧೆ. ಇವನ ಹೆಂಡತಿ ಅಂಬಕ್ಕಳಾದರು ಮಗ ಮತ್ತು ಗಂಡನ ಆರೋಗ್ಯ ಚೆನ್ನಾಗಿರುವುದಾದರೆ, ಯಾವ ಹೊಲೆಯ ಅಥವಾ ಮಾದಿಗನಾದರು ತಮ್ಮ ಮನೆಯೊಳಗೆ ಬರಬಹುದು, ಅವರು ಹೋದ ಮೇಲೆ ಪೂಜೆ ಮಾಡಿದರಾಯಿತು ಎಂಬ ಉದಾರತೆಯವಳು. ಇದಕ್ಕೂ ಒಂದು ಕಾರಣವಿದೆ ಯಾಕೆಂದರೆ ಇವರ ಮಗ ಜಗದೇವನು ಮಾದಿಗರ ಮಲ್ಲಿಬೊಮ್ಮನಾದಿಯಾಗಿ ತನ್ನೆಲ್ಲಾ ಗೆಳೆತನವನ್ನು ಆ ಕಾಲದಲ್ಲಿ ಕೀಳುವರ್ಗ ಎಂದು ಕರೆಯುತ್ತಿದ್ದ ಹೊಲೆ–ಮಾದಿಗರ ಸಹವಾಸದಲ್ಲಿಯೇ ಇದ್ದು ಅವನನುನಿನ್ನೇನು ಮಾಡಿಯೂ ತಿದ್ದಲು ಸಾಧ್ಯವಿಲ್ಲವೆಂದು ಅರಿವಾದಾಗ ಮಾತ್ರ ಇವರು ಅವನ ದಾರಿಗೆ ಅನಿವಾರ್ಯವಾಗಿ ಬರಬೇಕಾಯಿತು.

ಬಸವಣ್ಣ ಮತ್ತು ಬಿಜ್ಜಳ ಇಬ್ಬರೂ ಊರಲ್ಲಿ ಇಲ್ಲದಿರುವಾಗ ರಾಜ ಬಿಜ್ಜಳನ ಮಗನಾದ ಸೋವಿದೇವನು ಬ್ರಾಹ್ಮಣ ಚಾಡಿಕೋರರಾದ ದಾಮೋದರಭಟ್ಟ ಮತ್ತು ಮಂಚ್ಯಣಕ್ರಮಿತರ ಮಾತುಕೇಳಿಕೊಂಡು ಅರಮನೆಯ ಭಂಡಾರವನ್ನು ಹೊಡೆಸುವ ಪ್ರಯತ್ನ ಹೇಗೋ ಬಸವಣ್ಣನ ಆಪ್ತ ಶಿಶ್ಯನಾದ ಜಗದೇವನು ಇಪ್ಪತ್ತು ಸಾವಿರ ಶರಣರನ್ನು ಜೊತೆ ಗೂಡಿಸಿ ಭಂಡಾರಕ್ಕೆ ಕಾವಲಿರಲು ಹೋಗುತ್ತಾನೆ. ಸೋವಿದೇವನ ತಾಯಿ ಎಷ್ಟು ಹೇಳಿದರು ಅವರ ಮಾತನ್ನು ಕೇಳದ ಉದ್ದಟತನದ ವ್ಯಕ್ತಿತ್ವ ಅವನದಾಗಿದ್ದು ಇಡೀ ವ್ಯವಸ್ತೆಯನ್ನೆ ಹಾಳು ಮಾಡುತ್ತಿರುತ್ತಾನೆ. ಇವನ ಕಾರಣವಾಗಿಯೇ ಮಂಗಳವಾಡ ಹತ್ತಿ ಉರಿಯುತ್ತದೆ, ಅರಾಜಕತೆ ತಲೆ ದೋರುತ್ತದೆ.

ಜಗದೇವ ಇತ್ತ ಭಂಡಾರವನ್ನು ಕಾಯಬೇಕೋ ಅತ್ತ ಸಾವಿನ ಅಂಚಿನಲ್ಲಿರುವ ತನ್ನ ತಂದೆಯ ಸನಿಹದಲ್ಲಿರಬೇಕೋ ತಿಳಿಯದೆ ಕೊನೆಗೆ ಭಂಡಾರದ ಕಾವಲಿದ್ದು, ಬಸವಣ್ಣನೇ ಹಿಂದಿರುಗಿ ಬಂದು ಅವನ ತಂದೆಗೆ ಹುಶಾರಿಲ್ಲದ ಕಾರಣ ಮನೆಗೆ ಕಳುಹಿಸುತ್ತಾನೆ.

ಮಾದಿಗರ ಮಲ್ಲಿಬೊಮ್ಮನನ್ನ ಜೊತೆಯಲ್ಲೇ ಕರೆದುಕೊಂಡು ಬಂದು ಅವನನ್ನು ಮನೆಯೊಳಗೆ ಬರಲೇ ಬೇಕೆಂದು ಪೀಡಿಸುತ್ತಿರುತ್ತಾನೆ, ಆದರೆ ಇದಕ್ಕೆ ಪಕ್ಕದ ಮನೆಯವಳಾದ ಭಾಗೀರಥಿಯು ಆಕ್ಷೇಪವನ್ನು ಮಾಡಿದಾಗ 'ನಿಮ್ಮ ಮನೆಗೆ ನೀವು ಹೋಗಿ ನಮ್ಮ ಮನೆಯ ತಂಟೆಗೆ ಬರಬೇಡಿ' ಎಂದು ಗದರಿ ಕಳುಹಿಸಹುತ್ತಾನೆ. ಇದನ್ನು ನೋಡಿದ ಅವನ ತಾಯಿಯೇ ಮಲ್ಲಿಬೊಮ್ಮನಿಗೆ ಮನೆಯೊಳಗೆ ಬರಲು ಆಹ್ವಾನಿಸುತ್ತಾಳೆ. ಅವಳಿಗೀಗ ಜಾತಿಗೀತಿಯ ಮಡಿಮೈಲಿಗೆಯ ನಾಜೂಕಿಗಿಂತಲೂ ತನ್ನ ಗಮಡನ ಆರೋಗ್ಯ ಮತ್ತು ಮಗ ಮನೆಗೆ ಬರುವಿಕೆಯೇ ಮುಖ್ಯವಾಗಿತ್ತು. ಇತ್ತ ಶಾಸ್ತ್ರಿಗಳಿಗೆ ಎಚ್ಚರವಾದಾಗ ಬದಲಾದ ಈ ಮಗ ನನ್ನ ಮಗನಲ್ಲ ನನ್ನ ಮಗನೇನಿದ್ದರು ಮಡಿ ಮೈಲಿಗೆಯ ಶುದ್ಧತೆಯಿಂದ ಕೂಡಿದವನು ಮಾತ್ರ, ಹಾಗಾಗಿ ಜಾತಿ ಬಿಟ್ಟ ಇವನು ಬೇಡ ಮಡಿವಂತ ಮಗನು ಬರಲಿ ಎಂದಾಗ ಇವನಿಗೆ ಬೇಸರವಾಗುತ್ತದೆ.

ಎರಡನೆಯ ದೃಷ್ಯವು ಬಿಜ್ಜಳನ ಅರಮನೆಯಲ್ಲಿ ನಡೆಯುತ್ತದೆ, ರಾಣಿ ರಂಭಾವತಿಗೆ ಮಗನ ಈ ವಿಚಿತ್ರ ನಡವಳಿಕೆಯಿಂದಾಗಿಯೇ ಆರೋಗ್ಯ ಹದಗೆಟ್ಟಿದ್ದು ಹಾಸಿಗೆ ಹಿಡಿದಿರುತ್ತಾಳೆ. ಅಷ್ಟಾದರೂ ತಂದೆ ಬಿಜ್ಜಳನು ಈ ಶರಣರನ್ನು ಕೆಲಜಾತಿಯವರನ್ನು ತಲೆಮೇಲೆ ಬಿಟ್ಟು ಕೊಂಡಿರುದರಿಮದ ಅವರು ಮಿತಿ ಮೀರಿಹೋಗಿದ್ದಾರೆ, ಹೇಗಾದರು ಮಾಡಿ ಅವರನ್ನು ಬಗ್ಗು ಬಡಿಯಲೇ ಬೇಕೆಂದು ಹೇಳುತ್ತಾನೆ.

ರಂಭಾವತಿಯು ಬಸವಣ್ಣ ಯಾವುದೇ ಕಾರಣಕ್ಕು ಸ್ವಾಮಿಯಾದ ಬಿಜ್ಜಳಲಿಗೆ ಮೋಸ ಮಾಡುವುದಿಲ್ಲ ಎಂದು ಮಗನಿಗೆ ಹೇಳುತ್ತಾಳೆ, ಆದರೆ ದಾಮೋದರ ಭಟ್ಟನು ತಾವು ಭಂಡಾರ ತೆಗೆಯುವ ವಿಚಾರ ಇಷ್ಟು ವೇಗವಾಗಿ ಶರಣರಿಗೆ ತಿಳಿದು ಅವರೆಲ್ಲ ಗುಂಪುಗೂಡಿ ಬಂದು ಇದನ್ನು ತಡೆಯಲು ಹೇಗೆ ಸಾಧ್ಯವೆಂದು ಕೇಳುತ್ತಾನೆ. ಅಷ್ಟೊತ್ತಿಗೆ ಕಲ್ಲಪ್ಪ ಎಂಬುವ ಸೇವಕನು ಬಮದು ಬಿಜ್ಜಳ ಅರಮನೆಗೆ ಬಂದ ವಿಚಾರವನ್ನು ರಾಣಿ ರಂಭಾವತಿಗೆ ತಿಳಿಸುತ್ತಾನೆ.

ಕೋಪ ಆವೇಶದಿಂದಲೇ ಅರಮನೆಯನ್ನು ಪ್ರವೇಶಿಸಿದ ಬಿಜ್ಜಳನು ಅಗ ಸೋವಿದೇವನು ಬಸವಣ್ಣನ ಮೇಲೆ ಅನುಮಾನ ಪಟ್ಟು ಭಂಡಾರವನ್ನು ತನ್ನ ಅನುಮತಿ ಇಲ್ಲದೆ ತೆರೆಸಲು ಪ್ರಯತ್ನಿಸಿದುದಕ್ಕೆ ಆಕ್ಷೇಪಿಸುತ್ತಾನೆ. ಮಗನಿಗೆ ಮದುವೆ ಮಾಡಿದರೆ ಹೆಂಡತಿಯನ್ನು ಸರಿಯಾಗಿ ನೋಡಿಕೊಳ್ಳದೆ ತವರು ಮನೆಗೆ ಓಡಿಸಿದ್ದಾನೆ, ಇನ್ನು ನಾನು ಇರದಿರುವಾಗ ರಾಜ್ಯಭಾರ ಮಾಡುತ್ತಾನಾ ಇವನು. ಇವನ ಅಣ್ಣಂದಿರಿಗೆ ಶಿಕ್ಷಿಸಿ ಬುದ್ಧಿ ಕಲಿಸಿಂತೆ ಇವನಿಗೂ ಚಿಕ್ಕಂದಿನಿಂದಲೇ ಬುದ್ಧಿಕಲಿಸಿದ್ದರೆ ಇಂದು ಈ ಪರಿಸ್ಥಿತಿ ಬರುತ್ತಿರಲಿಲ್ಲ, ಇಷ್ಟಕ್ಕೆಲ್ಲ ರಂಭಾವತಿಯೇ ಕಾರಣವೆಂದು ದೂರುತ್ತಾನೆ. ತಾನು ಕ್ಷೌರಿಕ ಕುಲದವನಾದರು ಗೋವುಗಳನ್ನು ಬಾಹ್ಮಣರಿಗೆ ದಾನ ಮಾಡಿ ಕ್ಷತ್ರಿಯ ಜಾತಿಗೆ ಸೇರಿ ಹೊಯ್ಸಳರಿಂದ ಕಳಚೂರಿಗಳ ಹೆಣ್ಣುಗಳನ್ನು ಮದುವೆ ಮಾಡಿಕೊಂಡಿರುವುದನ್ನು ಹೇಳುತ್ತಾನೆ.

ಬಸವಣ್ಣ ತನ್ನ ಮಗ ಸೋವಿದೇವನನ್ನು ಭಂಡಾರದಲ್ಲಿ ಕೂಡಿ ಹಾಗಿ ಲೆಕ್ಕ ಸರಿ ಇರುವುದನ್ನು ಸಾಭಿತು ಮಾಡಿ ಇಡೀ ಊರಿನ ಜನರೆದುರು ಅವಮಾನ ಮಾಡಿದ್ದಾನೆ ಅಂತಹವನಿಗೆ ಸನ್ಮಾಸುವುದು ಸರಿಯಲ್ಲವೆಂದು ಆಕ್ಷೇಪಿಸುತ್ತಾಳೆ. ಆದರೆ ಬಿಜ್ಜಳನಿಗೆ ಬಸವನ್ನು ಕಮಡರಡ ಎಲ್ಲಿಲ್ಲದ ಅಕ್ಕರೆ ಯಾಕೆಂದರೆ ಅವರ ಜೊತೆ ಇದ್ದಾಗ ಮಾತ್ರಾ ತಾನೂ ಒಬ್ಬ ಮನುಷ್ಯನಾಗಿ ಕಾಣುವುದು, ತನ್ನಲ್ಲೂ ಮನುಷ್ಯತ್ವದ ಕುರುಹು ಕಾಣುವುದು. ಅಲ್ಲಮ, ದಾಸಿಮಯ್ಯ,ಚನ್ನಯ್ಯ, ಅಕ್ಕಮಹದೇವಿಯೇ ಮೊದಲಾದ ಬುದ್ಧಿಜೀವಿಗಳೊಂದಿಗೆ ಚರ್ಚಿಸಿ ಜಾತೀಯತೆಯನ್ನು, ವರ್ಣಾಶ್ರಮ ಪದ್ದತಿಯನ್ನು ಬೇರು ಸಹಿತ ಬುಡಮೇಲು ಮಾಡುತ್ತೇನೆ ಎಂಬ ಅವರ ಅಚಲ ವಿಶ್ವಾಸ ತನ್ನ ಮನಸ್ಸನ್ನು ಸೂರೆಯೊಡೆದಿದೆ ಎನ್ನುತ್ತಾನೆ. ನಮತರ ಬಸವ ಬಿಜ್ಜಳ ಮುಖಾಮುಖಿಯಾಗುತ್ತಾರೆ.

ಮೂರನೆಯ ದೃಷ್ಯದಲ್ಲಿ ಅರಮನೆಯ ಹೊರಗೆ ಬಸವ ಮತ್ತು ಬಿಜ್ಜಳ ಮುಖಾಮುಖಿಯಾಗುತ್ತಾರೆ. ಬಸವಣ್ಣನು ಯುವರಾಜನಾಗಿ ಮೆರೆದು ಬಂಢಾರವನ್ನು ತೆಗೆಸಿದ್ದನ್ನು ಆಕ್ಷೇಪಿಸುತ್ತಾನೆ, ಯುವರಾಜನಾದವನಿಗೆ ಕೆಲು ಗತ್ತು ಗಾಂಭಿರ್ಯ್, ಮಾನವೀಯತೆಗಳು ಬೇಕಾಗುತ್ತವೆ ಆದರೆ ಅದಾವುದು ಸೋವಿದೇವನಿಗೆ ಇರದಿರುವುದರಿಂದ ಯುವರಾಜ ಪಟ್ಟ ಆತನಿಗೆ ತಕ್ಕುದಾದುದಲ್ಲ ಎನ್ನುತ್ತಾನೆ. ಆದರೆ ರಾಜನ ಮಗನಿಗೆ ಸಹಜವಾಗಿಯೇ ಆ ಯುವರಜನಪಟ್ಟ ತಾನಾಗಿಯೇ ಲಭಿಸುತ್ತದೆ, ಪ್ರತಿಯೊಬ್ಬ ತಂದೆಯು ತನ್ನಹೆಂಡತಿ ಮಕ್ಕಳು, ತನ್ನ ಕುಟುಂಬಕ್ಕೋಸ್ಕರವೇ ದುಡಿಯುವವರೇ ಆದರೆ ಬಸವಣ್ಣನಿಗೆ ತನ್ನ ಮಗನ ಹೆಸರೇ ಗೊತ್ತಿಲ್ಲ ಹಾಗಾಗಿ ತಮ್ಮವರನ್ನು ಬಲಿಗೊಟ್ಟು ಇತರರನ್ನು ಓಲೈಸುವುದು ಸರಿಯಲ್ಲ ಎಂದು ಬಿಜ್ಜಳ ಹೇಳುತ್ತಾನೆ, ಜೊತೆಗೆ ಬಸವಣ್ಣನ ಮಗನಿದ್ದರೂ ಶೂನ್ಯಪೀಠದ ಅಧ್ಯಕ್ಷನನ್ನಾಗಿ ಬಸವನ ಸೋದರಳಿಯ ಚನ್ನಬಸವಣ್ಣನನ್ನು ಅಲ್ಲಮಪ್ರಭು ಆರಿಸಿದ್ದು ಸರಿಯಲ್ಲವೆಂದು ಹೇಳುತ್ತಾನೆ.

ಬಸವಣ್ಣ ಬಿಜ್ಜಲನ ಮಗ ಸೋವಿದೇವನ್ನು ತನ್ನ ಮೇಲೆ ಅನುಮಾನ ಪಟ್ಟಿದುದರಿಂದಾಗಿ ತನಗೆ ಭಂಡಾರದ ಜವಾಬ್ದಾರಿ ಬೇಡ, ಹಾಗಾಗಿ ಭಂಡಾರದ ಬೀಗದ ಕೈ ಹಿಂದಿರುಗಿ ಪಡೆಯಬೇಕೆಂದು ಹೇಳುತ್ತಾನೆ, ಆದರೆ ಬಿಜ್ಜಳನು ತೆಗೆದುಕೊಳ್ಳದೆ ಏನೋ ಅಚಾತುರ್ಯದಲ್ಲಿ ಸೋವಿದೇವನು ತಪ್ಪು ಮಾಡಿದ್ದಾನೆ, ಬೇಕಿದ್ದಾರೆ ಅವನ್ನು ಬಸವಣ್ಣನ ಕಾಲು ಹಿಡಿದು ಕ್ಷಮೆ ಕೇಳುವಂತೆ ಮಾಡುತ್ತೇನೆ ಎನ್ನುತ್ತಾನೆ.

ತಾನು ಭಂಡಾರದಲ್ಲಿ ಕೆಲಸ ಮಾಡುತ್ತಿರುವು ಬಿಜ್ಜಳನ ಅನುಕೂಲತೆಗಲ್ಲ ಬದಲಿಗೆ ಪ್ರಜೆಗಲ ಅನುಕೂಲಕ್ಕೆ, ಭಂಡಾರದಲ್ಲಿರುವ ಅಷ್ಟೂ ಹಣ ಜನರ ತೆರಿಗೆಯ ಹಣ ಹಾಗಾಗಿ ಅದು ಜನರ ಸದುಪಯೋಗಕ್ಕೆ ಸಲ್ಲಬೇಕೆಂಬ ಉದ್ದೇಶದಿಮದ ದುಡಿಯುವುದಾಗಿ ಹೇಳುತ್ತಾನೆ. ಜೊತೆಗೆ ರಾಜತ್ವ ಎಂಬುದು ಅರ್ಹತೆಯಿಂದ ಬರಬೇಕೆ ಹೊರತು ವಂಶಪಾರಂಪರ್ಯದಿಂದಲ್ಲ ಎನ್ನುತ್ತಾನೆ, ಬಿಜ್ಜಳನೂ ಆರಂಭದಲ್ಲಿ ಸಾಮಂತ ರಾಜನಾಗಿದ್ದು ತನ್ನ ಅರ್ಹತೆಯಿಂದ ರಾಜನಾದುದನ್ನು ನೆನಪಿಸಿಕೊಳ್ಳುತ್ತಾನೆ.

ಆರಂಭದಲ್ಲಿ ಯಾವುದೇ ಬೆಳವಣಿಗೆ ಕಾಣದ ಮಂಗಳವಾಡ ಬಿಜ್ಜಳ ಪ್ರವೇಶಿದ ನಂತರ ಅಭಿವೃದ್ಧಿಯ ಪತದತ್ತ ಸಾಗಲು ಬಸವಣ್ಣನೇ ಕಾರಣ ಹೇಗೆಂದರೆ ; ಅವನ ಜೊತೆ ಅನೇಕ ಜಾತಿಯ ಶರಣರು ಬಂದು ನೆಲೆಸಿದರು, ಕಾಯಕವೇ ಕೈಲಾಸವೆಮದು ತಿಳಿದ ಪ್ರತಿಯೊಬ್ಬರೂ ಮೈ ಬಗ್ಗಿಸಿ ದುಡಿಯತೊಡಗಿದರು. ಆ ದಿನದ ಆಹಾರಕ್ಕೆ ಎಷ್ಟು ಹಣಬೇಕೋ ಅಷ್ಟನ್ನು ಮಾತ್ರ ಪಡೆದು ದುಡಿದ ಪೂರ್ತಿ ಹಣವನ್ನು ಪಡೆಯದೆ ಇರುವ ಕಾರಣದಿಂದ ರಾಜ ಬೊಕ್ಕಸ ತುಂಬಿ ಹೋಯಿತು. ಜೊತೆಗೆ ಮಂಗಳವಾಡ ವಾಣಿಜ್ಯನಗರವಾಗುತ್ತಿದ್ದಂತೆ ಅನೇಕ ವಾಪಾರಸ್ತರು, ಅನೇಕ ಮುಂದುವರೆದ ಜನರು ತಮ್ಮ ಕೈಲಾದಷ್ಟು ಉಡುಗೊರೆಯ ಹಣವನ್ನು ಬಸವಣ್ಣನಿಗೆ ನೀಡಿದ್ದರಿಂದ ಎಲ್ಲಾ ಜನರಿಗೆ ದಾಸೋಹಮಾಡುವಂತಾಯಿತೇ ವಿನಃ ಬಸವಣ್ಣ ಭಂಡಾರದಿಂದ ಸ್ವಲ್ಪ ಹನವನ್ನು ವಿನಿಯೋಗಿಕೊಂಡಿಲ್ಲವೆಮದು ಬಸಣ್ಣನ ಗುಣಗಾನ ಮತ್ತು ಸಾಮರ್ಥ್ಯವನ್ನು ಮಂಚಣಕ್ರಮಿತನಿಗೆ ಹೇಳುತ್ತಾನೆ.

ನಾಲ್ಕನೇ ದೃಶ್ಯವು ಬ್ರಾಹ್ಮಣರ ಅಗ್ರಹಾರದಲ್ಲಿ ನಡೆಯುತ್ತದೆ. ಸಾಂಬಶಿವಶಾಸ್ತ್ರಿಗಳು ಈಗಾಗಲೇ ಗತಿಸಿದ್ದು, ಅವರ ಶ್ರಾದ್ಧ ಕರ್ಮವು ನಡೆಯುವ ಸಂದರ್ಭದಲ್ಲಿ ಅವರ ಮನೆಗೆ ಬಸವಣ್ಣ ಬರುತ್ತಾನೆ. ಅದರ ಹಿಂದೆ ಕಕ್ಕಯ್ಯನೇ ಮೊದಲಾದ ಶರಣರೂ ಬರುತ್ತಿರುತ್ತಾರೆ. ಏಕೆಂದರೆ, ಭಂಡಾರದಲ್ಲಿ ಪವಾಡ ಮಾಡಿದ ಈತ ಶಿವನ ಅವತಾರವೆಂದೇ ಭಾವಿಸಿರುತ್ತಾರೆ. ಬಸವಣ್ಣ ಅವರಿಗೆಲ್ಲ ಕೈಮುಗಿದು ತಾನು ಪವಾಡ ಮಾಡಿಲ್ಲವೆಂದು ಹೇಳಿದರೂ ಶರಣರು ತಾವು ಕಣ್ಣಾರೆ ಕಂಡಿರುವುದಾಗಿ ಹೇಳಿ ಅವನಿಗೆ ಜಯಕಾರವನ್ನು ಹಾಕುತ್ತಾರೆ. ಆಗ ಕಕ್ಕಯ್ಯನು ಜನರನ್ನು ಅಡ್ಡಗಟ್ಟಿ ಬಸವಣ್ಣನಿಗೆ ಸಾಂಬಶಿವರ ಮಗ ಜಗ್ಗಣ್ಣನ್ನು ಕಾಣಲು ಹೋಗಬೇಕೆಂದು ಸೂಚಿಸುತ್ತಾನೆ. ಆಗ ಬಸವಣ್ಣ ಅವರ ಮನೆ ಪ್ರವೇಶಿಸುತ್ತಾರೆ. ಸಾಂಬಶಿವಶಾಸ್ತ್ರಿಗಳ ಹೆಂಡತಿ ಅಂಬಕ್ಕ ಅವನನ್ನು ಸ್ವಾಗಿತಿಸುತ್ತಾಳೆ.

ಇತ್ತೀಚೆಗೆ ಬಸವಣ್ಣ ತಮ್ಮ ಮನೆಗೆ ಬಾರದಿದ್ದರ ಬಗ್ಗೆ ಅವನು ಪವಾಡ ಪುರುಷನಾದ್ದರಿಂದಲೇ ಇತ್ತ ಬರಲಿಲ್ಲವೆಂದು ಹೇಳಿ, ಇಂತಹ ಪವಾಡ ತನ್ನ ಗಂಡ ಸಾಂಬಶಿವಶಾಸ್ತ್ರಿಗಳ ಸಾವಿಗೂ ಆಗಿದ್ದರೆ ಬದುಕುಳಿಯುತ್ತಿದ್ದ ಎಂದು ನೊಂದು ಕೊಳ್ಳುತ್ತಾ, ಅಳುತ್ತಾಳೆ. ಅವಳನ್ನು ಸಮಾಧಾನಿಸಿದ ಬಸವಣ್ಣ ಅಂಬಕ್ಕನ ಮಗ ಜಗದೇವ ಎಲ್ಲಿದ್ದಾನೆ ಎಂದು ಕೇಳಿದಾಗ ಅವಳಿಗೆ ಬಸವಣ್ಣನಲ್ಲಿದ್ದ ಗೌರವ ಕ್ರಮೇಣ ಕ್ಷೀಣಿಸಿ ದಯವಿಟ್ಟು ತನ್ನ ಮಗನನ್ನು ತನ್ನಿಂದ ದೂರ ಮಾಡ ಬೇಡದೆಂದು ಅಂಗಲಾಚುತ್ತಾಳೆ. ತನ್ನ ಮಗ ಸೊಸೆಯದು ಈಗೀಗ ಗಂಡ ಹೆಂಡತಿಯಾಗಿ ಅನ್ಯೋನ್ಯ ಜೀವನ ನಡೆಸುತ್ತಿದ್ದಾರೆ ಪುನಃ ಅವರಿಬ್ಬರಲ್ಲಿ ವಿರಹವುಂಟುಮಾಡಿ ಅವನನ್ನು ಬ್ರಹ್ಮಚಾರಿ ಮಾಡಬೇಡವೆಂದು ಪರಿಪರಿಯಾಗಿ ಬೇಡಿಕೊಳ್ಳುತ್ತಾಳೆ. ಆಗ ಬಸವಣ್ಣ ಅಲ್ಲಿಂದ ಹೊರಡಲು ಸಿದ್ಧನಾಗುತ್ತಾನೆ. ಅಷ್ಟರಲ್ಲಿ ಪುರೋಹಿತನು ಶ್ರಾದ್ಧಮಾಡಿ ಬ್ರಾಹ್ಮಣರಿಗೆ ವೀಳ್ಯದೆಲೆ-ದಕ್ಷಿಣೆ ನೀಡಿ ಆ ಸ್ಥಳಕ್ಕೆ ಬಂದು ಪ್ರೇತವನ್ನು ಅವಾಹನೆ ಮಾಡಿಕೊಂಡ ಬ್ರಾಹ್ಮಣರು ಹೊರಟಿದ್ದಾರೆ ಅವರಿಗ್ಯಾರು ಅಡ್ಡ ಬರಬಾರದು, ಅವರನ್ಯಾರು ನೋಡಕೂಡದೆಂದು ಬಸವಣ್ಣನನ್ನು ತಡೆಯುತ್ತಾನೆ.

ಆದರೆ ಬಸವಣ್ಣನು ತನಗೆ ಇದರಲ್ಲಿ ನಂಬಿಕೆಯಿಲ್ಲ ಎನ್ನುತ್ತಾನೆ. ಅಷ್ಟೋತ್ತಿಗಾಗಲೇ ಜಗದೇವನು ತನ್ನ ತಂದೆಯ ಆತ್ಮಸಂತೃಪ್ತಿಗಾಗಿ, ತನ್ನ ತಾಯಿಯ ಸಂತೋಷಕ್ಕಾಗಿ ತನಗಿಷ್ಟವಿಲ್ಲದಿದ್ದರೂ ಮನೆಯವರ ಇಷ್ಟಕ್ಕಾಗಿ ತಲೆ ಬೋಳಿಸಿ, ಜನಿವಾರ ತೊಟ್ಟು, ಪಂಚೆ ಉಟ್ಟು ಪುರೋಹಿತರ ಮಧ್ಯೆ ಬರುತ್ತಿರುತ್ತಾನೆ. ನಂತರ ಹಿತ್ತಿಲಬಾಗಿಲತ್ತ ಧಾವಿಸುತ್ತಾನೆ. ಆಗ ಪುರೋಹಿತನು ಬಸವಣ್ಣನಿಗೆ ಈ ಮನೆ ಶ್ರಾದ್ಧಾದ ಮನೆಯಾದ್ದರಿಂದ ಬಸವಣ್ಣ ಇಲ್ಲಿಗೆ ಬರಬಾರದಿತ್ತು ಎನ್ನುತ್ತಾನೆ. ಅಷ್ಟರಲ್ಲಿ ಜಗದೇವ ಬಂದು ಬಸವಣ್ಣನ ಬಳಿ ಮಾತನಾಡಲು ಸಿದ್ಧನಾಗುತ್ತಾನೆ. ತನ್ನ ಈ ವೇಷ ನೋಡಿ ಆಶ್ಚರ್ಯ ಪಡಬಾರದೆಂದು ಇದೆಲ್ಲ ತನ್ನ ತಾಯಿಯ ಸಂತೋಷಕ್ಕಾಗಿ ಮಾಡಿದ್ದೆಂದು ಹೇಳುತ್ತಾನೆ. ತನ್ನ ತಂದೆ ಸಾವಿಗೆ ಹೆದರಿ ಸತ್ತ ಹಾಗೆ ತನಗೂ ಎಲ್ಲಿ ಆಗುತ್ತದೋ ಎಂದು ಆತಂಕ ವ್ಯಕ್ತಪಡಿಸುತ್ತಾನೆ. ಇದಕ್ಕೆ ಬಸವಣ್ಣ ಹೆದರಿಕೆಯನ್ನು ಸ್ವೀಕರಿಸಿ ಅದನ್ನು ಒಪ್ಪಿಕೊಳ್ಳಬೇಕು, ಆಗಲೇ ನಮಗೆ ನಮ್ಮ ಸತ್ಯ ತಿಳಿಯುವುದು ಎನ್ನುತ್ತಾನೆ. ಅಷ್ಟೊತ್ತಿಗೆ ಬಸವಣ್ಣನ ಮೇಲೆ ಜಯಕಾರ, ಗದ್ದಲ ಹೆಚ್ಚಾದಾಗ ಬಸವಣ್ಣನು ತಾನಿಲ್ಲಿರುವವರೆಗೆ ಈ ಗದ್ದಲ ಇದ್ದದ್ದೇ ತಾನಿನ್ನ ಹೊರಡುತ್ತೇನೆ ಕತ್ತಲಾಗುವುದರಲ್ಲಿ 'ಮಡ್ಡೂರು' ತಲುಪಬೇಕೆನ್ನುತ್ತಾನೆ.

ಜಗದೇವನು ಬಸವಣ್ಣನಿಗೆ ಹೋಗಬಾರದು ತಾನು ಇನ್ನೂ ಏನೇನೋ ಮಾತಾಡಬೇಕೆಂದು ತಡೆಯಲು ಪ್ರಯತ್ನಿಸಿ ವಿಫಲವಾಗುತ್ತಾನೆ. ಏಕೆಂದರೆ ಮಡ್ಡೂರಿನಲ್ಲಿ ಕೆಲವರು 'ಜೈನ ಬಸದಿಯ ವಿಗ್ರಹಗಳನ್ನು ಒಡೆದು ಹಾಕಿ ಅಲ್ಲಿ ಶಿವಾಲಯ ಮಾಡಲು ಹೊರಟ್ಟಿದ್ದಾರೆ' ಈ ಅನರ್ಥ ತಪ್ಪಿಸಬೇಕೆಂದಾಗ ಜಗದೇವನು ಅದನ್ನು ತಪ್ಪಿಸುವುದು ಬೇಡ ಈ ಮೊದಲೆಲ್ಲಾ ಜೈನರು ತಮ್ಮ ಶಿವಾಲಯದ ಮೇಲೆ ಇದೇ ರೀತಿಯ ವರ್ತನೆ ಮಾಡಿದ್ದರು ಈಗ ನಮ್ಮವರ ಸರದಿ ಮಾಡಲಿ ಎನ್ನುತ್ತಾನೆ. ಇದನ್ನು ಒಪ್ಪದ ಬಸವಣ್ಣ 'ಯಾರೋ ತಪ್ಪು ಮಾಡುತ್ತಾರೆಂದು ನಾವೂ ತಪ್ಪು ಮಾಡಿದರೆ ನಮಗೂ ಅವರಿಗೂ ವ್ಯತ್ಯಾಸವಿರುವುದಿಲ್ಲ. ಈ ಹಿಂಸೆ, ಕಲ್ಲು-ಮಣ್ಣುಗಳ ದೇವಾಲಯ ವ್ಯರ್ಥವಾದವುಗಳು, ನಿಜವಾದ ದೇವಾಲಯ ನಮ್ಮ ದೇಹ, ಕಾಲೇ ಕಂಭ, ದೇಹವೇ ದೇಗುಲ, ಶಿರವೇ ಹೊನ್ನಕಳಶ' ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕಳಿವಿಲ್ಲ ಎನ್ನುತ್ತಾನೆ.

ಇದಕ್ಕೆ ಪ್ರತಿಯಾಗಿ ಜಗದೇವನು ಮತ್ತೊಂದು ಅಂಬಲೂರಿನ ಕತೆ ಹೇಳುತ್ತಾನೆ. ಇಲ್ಲಿ ಏಕಾಂತದ ರಾಮಯ್ಯನು ಜೈನರ ಬಸದಿ ಪ್ರವೇಶಿಸಿ ಪವಾಡ ಮಾಡಿದ್ದರಿಂದ ಅವನ ರುಂಡವನ್ನು ಪಾರಿವಾಳ ಹಾರಿಸಿದಂಗೆ ಹಾರಿಸಿದರು ಎನ್ನುತ್ತಾನೆ. ಆಗ ಬಸವಣ್ಣ ಈ ಜೀವನವೇ ಒಂದು ಪವಾಡ. ಅದರೊಳಗೆ ಇನ್ನೊಂದು ಪವಾಡ ಹುಡುಕುವುದು ಬೇಡ ಎನ್ನುತ್ತಾನೆ. ಹಾಗೆ ಮಾತು ಮುಂದುವರೆಸಿದ ಜಗದೇವನು ಬಸವಣ್ಣನು ಅರಮನೆಯ ಭಂಡಾರದಲ್ಲಿ ಪವಾಡ ನಡೆಸಿರುವುದನ್ನು ಪ್ರಸ್ತಾಪಿಸುತ್ತಾನೆ. ಅದನ್ನು ಬಸವಣ್ಣ ನಿರಾಕರಿಸುತ್ತಾನೆ. ಶರಣರಲ್ಲಿ ಯಾರೋ ಪವಾಡದ ಬಗ್ಗೆ ಸುಳ್ಳೂ ಸುದ್ಧಿ ಹಬ್ಬಿಸಿದ್ದಾರೆ ಎನ್ನುತ್ತಾನೆ. ಜೊತೆಗೆ ಶರಣರಿಂದಲೇ ಸಾಕಷ್ಟು ಸಹಾಯವಾಗುತ್ತಿರುವಾಗ, ಶಿವನ ಕೃಪೆ ತನ್ನ ಮೇಲಿರುವಾಗ ತಾನೇಕೆ ಬಿಜ್ಜಳನ ಭಂಡಾರಕ್ಕೆ ಆಸೆ ಪಡಲಿ ಎನ್ನುತ್ತಾನೆ. ಜಗದೇವ ನಿನಗೆ ನನ್ನ ಮೇಲೆ ಅನುಮಾನ ಬರಬಾರದಿದ್ದು ಎನ್ನುತ್ತಾನೆ.

ಜಗದೇವನು ತಾನು ಭಂಡಾರಕ್ಕೆ ಕಾವಲಿರುವಾಗ ಅತ್ತ ತನ್ನ ತಂದೆ ಸಾವಿನ ಅಂಚಿನಲ್ಲಿದ್ದು ಇದರಿಂದ ತನ್ನ ತಾಯಿ ಹಣೆ ಹಣೆ ಚಚ್ಚಿಕೊಳ್ಳುತ್ತಿದ್ದರೂ ನಾನು ಅಲ್ಲಿಗೆ ಹೋಗದೆ ಇಲ್ಲಿ ಕಾಯುತ್ತಿದ್ದೆ ಆ ನಂತರ ತಂದೆ ಸತ್ತಾಗ ೧೧ ದಿನಗಳ ಶ್ರಾದ್ಧಾ ನೆರವೇರಿಸಲು ಹೋದಾಗ ಇತ್ತ ಭಂಡಾರದಲ್ಲಿ ಪವಾಡ ನಡೆದೇ ಹೋಗಿದೆ ಜನ ಎಲ್ಲ ಬಸವಣ್ಣನನ್ನ ಹೊಗಳುತ್ತಿದ್ದಾರೆ ಎನ್ನುತ್ತಾನೆ. ಆಗ ಬಸವಣ್ಣ ತಾನು ಯಾರ ಬಾಹ್ಯ ಸಂಪರ್ಕ ಇಲ್ಲದೆ ಭಂಡಾರದಲ್ಲೇ ಕುಳಿತಿದ್ದೇ ಎನ್ನುತ್ತಾನೆ. ಇದೊಂದು ಹೊನ್ನಿನ ಶೂಲ ಎನ್ನುತ್ತಾನೆ.

ಜಗದೇವನ ತಂದೆ ಯಾರ್ಯಾರನ್ನು ನಂಬಿದ್ದರೋ ಅವರೆಲ್ಲ ಅವರ ಸಾವನ್ನ ತಡೆಯಲು ಸಾಧ್ಯವಾಗಲಿಲ್ಲ. ಬಿಜ್ಜಳ, ಬಸವ, ಜಗದೇವ, ದೇವರು ಎಲ್ಲ, ಎಲ್ಲರೂ ಅವರನ್ನು ಕೈಬಿಟ್ಟರು ಎನ್ನುತ್ತಾನೆ. ಅವರು ಸಾವಿಗೆ ಹೆದರಿ ಅಳುತ್ತಲೇ ಪ್ರಾಣ ಬಿಟ್ಟರು ಎನ್ನುತ್ತಾನೆ.

ಜಗದೇವನ ತಂದೆ ಸಾಂಬಶಿವಶಾಸ್ತ್ರಿಯನ್ನು ಬಿಜ್ಜಳ ನಿವೃತ್ತಿಗೊಳಿಸಿ, ಅಧಿಕಾರ ಕಿತ್ತುಕೊಂಡು, ಅವಮಾನ ಪಡಿಸಿದ್ದರಿಂದ ಅದರಲ್ಲೇ ಸೊರಗಿ ಅವನು ಸತ್ತನೆನ್ನುತ್ತಾನೆ. ಬಸವಣ್ಣನು ತಾನು ಭಂಡಾರದ ಕೆಲಸ ಬಿಟ್ಟು ಬಂದಿದ್ದೇನೆಂದು ಹೇಳುತ್ತಾನೆ. ಆಗ ಜಗದೇವನು ಬಸವಣ್ಣನನ್ನು ಠಕ್ಕ, ಚೋರ, ನೀಚ ಎಂದೆಲ್ಲ ನಿಂದಿಸುತ್ತಾನೆ. ಇವನ ವರ್ತನೆ ಪ್ರಶ್ನಿಸಿದಾಗ ತನ್ನ ತಂದೆ ಮೊದಲೇ 'ಬಸವಣ್ಣನ ವ್ಯಕ್ತಿತ್ವ ಮಹಾ ಘಟಿಂಗ ವ್ಯಕ್ತಿತ್ವ, ನಂಬಬೇಡ ಎಂದು ಹೇಳಿದ್ದ ಎನ್ನುತ್ತಾನೆ'

ಬಸವಣ್ಣನು ತನ್ನ ಆಲೋಚನ ಕ್ರಮ 'ಆಧುನಿಕವಾದುದ್ದರಿಂದಲೂ ಜಗದೇವನ ತಂದೆ ಸಾಂಬಶಿವಶಾಸ್ತ್ರಿಗಳ ಆಲೋಚನೆ ಸನಾತನ'ವಾದದ್ದರಿಂದಲೂ ಇಬ್ಬರ ಮನಃ ಸ್ಥಿತಿಗೂ ಅಜಗಜಾಂತರ ವ್ಯತ್ಯಾಸವಿದ್ದುದನ್ನು ಹೇಳುತ್ತಾನೆ. ಅಷ್ಟರಲ್ಲಿ ಶರಣರೆಲ್ಲ ಬಾಗಿಲು ಮುರಿದು ಒಳ ಬರುವಷ್ಟು ಗದ್ದಲ ಮಾಡಿದಾಗ ಬಸವಣ್ಣ ಹೋಗಲು ಸಿದ್ಧನಾಗುತ್ತಾನೆ ಆಗ ಜಗದೇವ ಅದನ್ನು ತಡೆಯುತ್ತಾನೆ.

ಬಸವಣ್ಣನನ್ನು ಬಿಟ್ಟರೆ ತನ್ನ ಜೊತೆ ಯಾರೂ ಮಾತನಾಡುವುದಿಲ್ಲ, ಬಸವಣ್ಣನೇ ತನಗೇನೋ ಮಾಟಾ ಮಾಡಿದ್ದಾನೆ ಎನ್ನುತ್ತಾನೆ. ನೀನೇ ನನಗೆ ದಿಕ್ಕು ಎಂದು ಅಂಗಲಾಚುತ್ತಾನೆ. ಬಸವಣ್ಣ ಅವನ ತಲೆಯ ಮೇಲೆ ಕೈಯಿಟ್ಟು 'ಓಂ ನಮಃ ಶಿವಾಯ!' ಎಂದು ಹೇಳಿಸುತ್ತಾನೆ. ಆಗ ಜಗದೇವನು ತನ್ನನ್ನು ಅಳಿಸುವವನೂ ನೀನೇ, ನಗಿಸುವವನೂ ನೀನೆ ಎನ್ನುತ್ತಾನೆ.

ಬಸವಣ್ಣನು ತಾನು ಅಲ್ಲಮ ಪ್ರಭುವಿನಿಂದ 'ಅಹಂಕಾರ' ಎಂದರೇನು ಎಂದು ತಿಳಿದ ಬಗೆಯನ್ನು ತಿಳಿಸುತ್ತಾನೆ. ನಂತರ ಶಿವ ಸುಂದರ ಮಾತ್ರ ಅಲ್ಲ. ಅದರ ಜೊತೆಗೆ ಕೆಟ್ಟದ್ದು, ಕೊಳಕು, ನೀಚತನ, ಹೇಳಲಿಕ್ಕಾಗದಂಥ ರಾಜಿ, ಕೊಳಚೆ, ಸುಗಂಧ, ಹೂ, ಹುಳುತಿಂದ ತಲೆ ಬುರುಡೆ, ಮಾಂಸಬಂಡ, ಕೀವು, ಜಡೆ ಹೀಗೆ ಪವಿತ್ರದ ಜೊತೆ, ಭೀಭತ್ಸವೂ ಇರುತ್ತದೆನ್ನುತ್ತಾನೆ.

ಅಷ್ಟೊತ್ತಿಗೆ ಮನೆಯ ಮೇಲೆ ಶರಣರು ಕಲ್ಲು ತೂರಿದ್ದರಿಂದ ತಾಯಿ ಅಂಬಕ್ಕ ಬಸವಣ್ಣನ ಮೊರೆ ಹೋಗುತ್ತಾಳೆ. ಆಗ ಬಸವಣ್ಣ ಅಲ್ಲಿಂದ ಹೊರಟು ಹೋಗುತ್ತಾನೆ.

ಇತ್ತ ಪುರೋಹಿತ ಪೌರೋಹಿತ್ಯ ಮುಂದುವರೆಸುತ್ತಾನೆ. ಇಂದು ಬಳಸಿದ್ದನ್ನ ಪುನಃ ಬಳಸಬಾರದು ಹೊಳೆಗೆ ಹಾಕಬೇಕೆನ್ನುತ್ತಾನೆ. ಅಷ್ಟರಲ್ಲಿ ಜಗದೇವನ ಹೆಂಡತಿ ಅವನ ಮುಂದೆ ಬಂದು ನಿಲ್ಲುತ್ತಾಳೆ. ಅದನ್ನು ಕಾಣದಂತೆ ಅವನೂ ನಿಲ್ಲುತ್ತಾನೆ ಹೀಗೆ ಯೋಚಿಸುತ್ತಾನಿಂತ ಜಗದೇವ ಮುಖ್ಯ ಪ್ರಶ್ನೆ ಕೇಳುವುದೇ ಮರೆತಿರುತ್ತಾನೆ. ಅದೇನೆಂದರೆ 'ಭಕ್ತ ತನ್ನ ಇಷ್ಟಲಿಂಗ ಕಳೆದುಕೊಂಡರೆ ಆತ್ಮಹತ್ಯಾ ಮಾಡಿಕೊಳ್ಳಬೇಕು ಅಂತ' ಆದರೆ ತಾನು ಜನಿವಾರವನ್ನು ಕಳೆದುಕೊಂಡು, ಇತ್ತ ಇಷ್ಟಲಿಂಗವನ್ನು ಕಳೆದುಕೊಂಡಿದ್ದು ಇದಕ್ಕೆ ತಕ್ಕ ಪ್ರಾಯಶ್ಚಿತ್ತ ಯಾವುದು? ಎಂದು ಪ್ರಶ್ನಿಸಿಕೊಳ್ಳುತ್ತಾನೆ.

ಐದನೆಯ ದೃಶ್ಯವು ಮಹಾಮನೆಯಲ್ಲಿ ನಡೆಯುತ್ತದೆ. ಇಲ್ಲಿ ದಲಿತರಿಗೆ ದೀಕ್ಷೆ ಕೊಡುವು ಹಾಗೂ ಬ್ರಾಹ್ಮಣ ಹುಡುಗಿ ಮತ್ತು ದಲಿತ ಹುಡುಗನಿಗೂ ವಿವಾಹವನ್ನು ನಿಶ್ಚಯಿಸುತ್ತಾರೆ.

ಆಂಧ್ರದಲ್ಲಿ ಬರಗಾಲವುಂಟಾದ್ದರಿಂದ ಬದುಕಬೇಕೆಂಬ ಆಸೆಯಿಂದ ಮಹಾಮನೆಗೆ ಬಂದ ಕಾಡುಕುರುಬರಿಗೆ ಜಾತಿನಿಂದನೆ ಮಾಡಿ ಹೊರಹಾಕಿದ್ದಾಗ ಬಸವಣ್ಣ ಆಶ್ರಯ ನೀಡಿರುತ್ತಾನೆ. ಕಕ್ಕಯ್ಯನು ಕಂಬಳಿ, ಬಟ್ಟೆ ಹಂಚಿ ಮೂಲ ಸೌಕರ್ಯ ಒದಗಿಸುತ್ತಿದ್ದಾನೆ. ಅಲ್ಲಿ ಬಸವಣ್ಣ, ತರುಣ ಶರಣರಾದ ಕಾಳಯ್ಯ, ಗುಂಡಣ್ಣರೂ ಇದ್ದಾರೆ. ನಿರಾಶ್ರಿತರಾದ ಇವರಿಗೆ ಮೊದಲು 'ಲಿಂಗದೀಕ್ಷೆ' ಕೊಡಬೇಕೆಂದ ಗುಂಡಣ್ಣನ ಮಾತಿಗೆ ಬಸವಣ್ಣನು ಮೊದಲು ಇವರಿಗೆ ಮನೆ, ಚಾಪೆ, ಜಾಗ ದೊರಕಬೇಕು ಆ ನಂತರ ಆಧ್ಯಾತ್ಮ ಎನ್ನುತ್ತಾನೆ.

ಈ ಸಮಯದಲ್ಲಿ ಸಮಗಾರ ದಲಿತರಾದ ಹರಳಯ್ಯ ಹೆಂಡತಿ ಕಲ್ಯಾಣಿ ಇವರ ೧೫ ವರ್ಷದ ಮಗ ಶೀಲ ಮತ್ತು ಬ್ರಾಹ್ಮಣರಾದ ಮಧುವರಸ ಅವನ ಹೆಂಡತಿ ಲಲಿತಾಂಬಾರ ೧೧ ವರ್ಷದ ಮಗಳು 'ಕಲಾವತಿ' ಹಾಗೂ ಇನ್ನಿತರರು ಶರಣರು ಬರುತ್ತಾರೆ. ಬಂದವರನ್ನು ಆಹ್ವಾನಿಸಿದ ಬಸವನ ಪತ್ನಿ ಗಂಗಾಂಬಿಕೆಯು ಶೀಲ ಮತ್ತು ಕಲಾವತಿಯ ನಿಶ್ಚಿತಾರ್ಥಕ್ಕೆ ದವಸ ಧಾನ್ಯ ತೆಗೆದುಕೊಂಡು ಹೋಗ ಬೇಕೆಂದು ಹೇಳುತ್ತಾಳೆ. ಬಸವಣ್ಣನು ಕುಕ್ಕೆಶೆಟ್ಟರನ್ನು ಕಾಯುತ್ತಾ ಇದ್ದಾಗ ಗಂಗಾಂಬಿಕೆಯು ಬಾರದವರನ್ನ ಕಾಯುವುದಕ್ಕಿಂತ ಬಂದವರನ್ನ ಮಾತಾಡಿಸಿ ಎಂದಾಗ ಬಸವಣ್ಣನು ಇವರು ನನ್ನನ್ನಲ್ಲ ನೋಡಲು ಬಂದದ್ದು ನಿನ್ನನ್ನು ಎನ್ನುತ್ತಾ ಅದನ್ನು ವಿಸ್ತರಿಸಿ ತನ್ನದೊಂದು ಅನಿಸಿಕೆ (ಲೆಕ್ಕ) ಹೇಳುತ್ತಾನೆ. ನಗುನಗುತ್ತಾ ಬರೋರೆಲ್ಲ ಗಂಗಾಳನ್ನು ಕಾಣಲು ಬರುತ್ತಾರೆ; ಮುಖಗಂಟು ಹಾಕಿಕೊಂಡು ಬರುವವರೆಲ್ಲ ಬಸವಣ್ಣನನ್ನು ನೋಡಲು ಬರುತ್ತಾರೆ" ಎನ್ನುತ್ತಾನೆ.

ಆಗ ಮಧುವರಸನು ತನ್ನ ಮಗಳು ಕಲಾವತಿಗೂ ಶೀಲನಿಗೂ ಮದುವೆ ನಿಶ್ಚಿತಾರ್ಥ ನಾಳೆಯಿದ್ದು, ನೀವು ಬರಬೇಕೆಂದು ಆಹ್ವಾನಿಸುತ್ತಾನೆ. ಆಗ ಬಸವಣ್ಣನು ತಮಗೆ ಆಯಸ್ಸು ಆಯಿತು ಎಂದು ನಗೆ ಯಾಡಿದರು ಅಂತರ್ಜಾತಿ ವಿವಾಹವೆಂದು ತಿಳಿದು ಚಿಂತಾಕ್ರಾಂತನಾಗಿ ಮೌನಿಯಾಗುತ್ತಾನೆ. ಇದನ್ನು ಗಮನಿಸಿದ ಮಧುವರಸನು ನಿಮ್ಮ ಅಂತರ್ಜಾತಿ ಕನಸು ಈಗ ನನಸಾದ್ದರಿಂದ ಸಂತೋಷದಿಂದಿರುತ್ತೀರೆಂದು ತಿಳಿದಿದ್ದೆ, ಆದರೆ ಈ ರೀತಿ ದುಃಖಿತರಾಗುತ್ತೀರ ಎಂದು ತಿಳಿದಿರಲಿಲ್ಲ ಎಂದು ತನ್ನ ನೋವನ್ನು ಬಸವಣ್ಣನಿಗೆ ಹೇಳುತ್ತಾನೆ. ಅದಕ್ಕೆ ಗಂಡಿನ ತಂದೆಯಾದ ಹರಳಯ್ಯನು ಸಹಾ 'ನಿಮಗೆ ಆಶೀರ್ವಾದ ಮಾಡಲು ಸಹ ಕೈ ಬರುವುದಿಲ್ಲ'ವೆಂದು ತನ್ನ ನೋವನ್ನೂ ವ್ಯಕ್ತಪಡಿಸುತ್ತಾನೆ. ಅದಾವುದಕ್ಕೂ ಬಸವಣ್ಣ ಮರುಮಾತನಾಡುವುದಿಲ್ಲ.

ಈ ಮಧ್ಯೆ ಬಾಯಿ ಹಾಕಿದ ಕಕ್ಕಯ್ಯ ವಾಸ್ತವತೆಯ ಅರಿವು ಮೂಡಿಸುತ್ತಾನೆ. ಇಂಥ ವಿಚಾರವನ್ನು ಪೂರ್ತಿ ಆಲೋಚಿಸ ಬೇಕೆನ್ನುತ್ತಾನೆ. ಸರಳ ನಿರ್ಧಾರಕ್ಕೆ ಬರಬಾರದೆಂದು ಸಲಹೆ ನೀಡುತ್ತಾನೆ. ಶರಣರಲ್ಲೇನೋ ಜಾತಿ ಇಲ್ಲ. ಬ್ರಾಹ್ಮಣನಾಗಲೀ, ಸಮಗಾರದಲಿತರಾಗಲೀ ಎಲ್ಲ ಒಂದೇ ಈ ರೀತಿಯ ಅಂತರ್ಜಾತಿಯ ಬೆಸೆಯುವಿಕೆ ಶರಣರಿಗೇನೋ ಸಂತೋಷದ ಹಬ್ಬ, ಆದರೆ ನಮ್ಮ ಸುತ್ತಮುತ್ತಲೂ ಇರುವ ಸಾಮಾನ್ಯ ಜನ ಇದನ್ನು ವಿರೋಧಿಸುತ್ತಾರೆ. ಮಧುಮಗನಾದ 'ಶೀಲ' ಇನ್ನೂ ಚಿಕ್ಕವನು ದೊಡ್ಡವರ ಮಾತಿಗೆ ತಲೆಬಾಗುತ್ತಾನೆ. ಮುಂದಿನ ಯೋಚನಾ ಶಕ್ತಿ ಅವನಿಗಿಲ್ಲ.

ಎನ್ನುತ್ತಾ ಅವನಿಗೆ ನೇರವಾಗೇ 'ಈ ಮಧುವೆಗೆ ನಿನ್ನ ಒಪ್ಪಿಗೆ ಇದೆಯಾ ಎಂದು ಕೇಳುತ್ತಾನೆ'. ಆಗ ಅವನು ತಂದೆ ತಾಯಿಗಳ ಮುಖ ನೋಡುತ್ತಾನೆ. ನಂತರ ತನಗೆ ಈ ಮಧುವೆ ಬೇಡ ಎನ್ನುತ್ತಾನೆ. ಇದಕ್ಕೆ ಕಾರಣ ಕೊಡುತ್ತಾ ತನ್ನ ಹೆಂಡತಿಯಾಗಲಿರುವ 'ಕಲಾವತಿ ಹೂವಿದ್ದ ಹಾಗೆ ಮದುವೆಯಾದರೆ ಅವಳ ಜನ್ಮ ಹಾಳಾಗುತ್ತೆ' ಜನರೆಲ್ಲ ಅವಳನ್ನು ಸಮಗಾರನ ಹೆಂಡತಿ ಎಂದು ಹೀಯಾಳಿಸಿ ಅಣಕಮಾಡುತ್ತಾರೆ.  ತನ್ನ ಕಾಯಕ ಬೇರೆ ಅವರದು ಬೇರೆ ಎಂದು ಅಳುತ್ತಾನೆ.  ತನ್ನ ತಂದೆಯ ಕಸುಬು ತಾನು ಬಿಡುವುದಿಲ್ಲ ಎನ್ನುತ್ತಾನೆ.

ಜೊತೆಗೆ ಕಲಾವತಿಯು ಬ್ರಾಹ್ಮಣಳಾದ್ದರಿಂದ ಚರ್ಮದ ನಾತ (ವಾಸನೆ) ತಡೆದುಕೊಳ್ಳಲಾಗುವುದಿಲ್ಲ. ಮಾಂಸದ ಅಂಗಡಿ ಮುಂದೆ ಹೋಗುವಾಗ ಅವಳು ಕದ್ದು ಮೂಗು ಮುಚ್ಚಿಕೊಳ್ಳುತ್ತಾಳೆ. ಇಡೀ ಜೀವನ ಅವಳು ಹೀಗೆ ಕಳೆಯುವುದು ತನಗಿಷ್ಟವಿಲ್ಲ ಎನ್ನುತ್ತಾನೆ.

ಆಗ ಕಲ್ಯಾಣಿಯ ತಾಯಿಯಾದ ಲಲಿತಾಂಬಳು ಮಾತಾಡುತ್ತಾ ತನ್ನ ಮಗಳು ಬ್ರಾಹ್ಮಣರ ಅಗ್ರಹಾರದಲ್ಲಿ ಚಪ್ಪಲಿ ಇಲ್ಲದೆ ನಡೆಯುವುದಿಲ್ಲ ಮಡಿಯಲ್ಲಿ ಬೆಳೆದವಳು ಕರ್ಪೂರದ ವಾಸನೆ ಕಂಡರೇನೆ ಆಗೊಲ್ಲ. ಆದರೆ ಈಗ ಎಮ್ಮೆ ಚರ್ಮಸುಲಿದು, ಹದ ಮಾಡಲಾರಳು, ಜೊತೆಗೆ ಇವರ ಕೇರಿಗೆ ಹೋದರೆ ವಾಂತಿ ಮಾಡಿ ಹಾಸಿಗೆ ಹಿಡಿಯುತ್ತಾಳೆ ಎನ್ನುತ್ತಾಳೆ. ಆಗ ಶೀಲನ ತಾಯಿ ಕಲ್ಯಾಣಿಯು ಎಮ್ಮೆ ಚರ್ಮ ಸುಲಿಯೋರು ಹೊಲೆಯ ಜಾತಿಯವರು, ಹದಮಾಡುವವರು ಮಾದಿಗರು ಮತ್ತು ಡೋಹರು ಎನ್ನುತ್ತಾಳೆ. ನಂತರ ಹರಳಯ್ಯನು ಮಾತನಾಡುತ್ತಾ ನಾವು ಶರಣರಾದ್ದರಿಂದ ಹೆಂಡ, ಮಾಂಡ ಬ್ಯಾಡ ಅನ್ನುತ್ತೀವಿ. ಅದೇ ರೀತಿ ಅವರು ಹಳೆಯದನ್ನೇ ಯಾಕೆ ಹೊಲೆಯಬೇಕು ಅಂದರೂ ಅವರಿಗೆ ಬೇರೆಯಾವ ಕೆಲಸವೂ ಗೊತ್ತಿಲ್ಲ. ಹಾಗೆ ತಮಗೂ ಸಹ ತಮ್ಮ ಕಸುಬು ಬಿಟ್ಟು ನೇಕಾರ ಕಸುಬೋ, ಕುಂಬಾರ ಕಸುಬೋ  ಮಾಡಲು ಸಿದ್ಧವಾದರೂ ಆ ಕಸುಬಿನವರು ಒಪ್ಪುವುದಿಲ್ಲ ಎನ್ನುತ್ತಾನೆ. ಒಟ್ಟಾರೆ ತಮ್ಮ ಮನೆ ಊರಿನ ಮಧ್ಯೆ ಇದೆ ಇನ್ನು ಊರ ಹೊರಗಿರುವವರ ಹೊಲೆಯ ಮಾದಿಗರ ಶೋಷಣೆ ಯಾವ ರೀತಿ ಇರಬಹುದೆಂದು ದಃಖಿಸುತ್ತಾನೆ.

ಹರಳಯ್ಯನ ತಾಯಿ ತನ್ನ ಜಾತಿ ಬಿಡಲು ಸಾಧ್ಯವಿಲ್ಲ ಅದಕ್ಕೆ ತನ್ನ ಮನೆದೇವು 'ಅಳ್ಳೀದ್ಯಾಮವ್ವ' ಒಪ್ಪಲ್ಲ ಎಂದಾಗ ತಾಯಿಯನ್ನೇ ಬಿಟ್ಟು ತಾವು (ಹರಳಯ್ಯ, ಕಲ್ಯಾಣಿ) ಶರಣರಾದರು. ಈಗ ತನ್ನ ತಾಯಿ ಶೀಲ-ಕಲಾವತಿ ಮಧುವೆ ನಡೆದರೆ ರಕ್ತದ ಕೋಡಿಯೇ ಹರಿಯುತ್ತದೆಂದು ಭವಿಷ್ಯ ನುಡಿಯುತ್ತಿದ್ದಾಳೆ.

ಮಧುವರಸನು ಹತ್ತು ವರ್ಷದ ಹಿಂದೆ 'ಪಾಶುಪತಗುರು'ಗಳನ್ನು ಸಂದರ್ಶಿಸಿ ತ್ರಿಕಾಲ ಭಸ್ಮ ಸ್ನಾನ, ಮೈಗೆಲ್ಲ ಬೂದಿ ಬಳದುಕೊಂಡು, ಕೂಗಾಡಿ, ಕುಣಿದಾಡಿ ಕೆಲವು ದಿನಗಳಲ್ಲೇ ಬೌದ್ಧರಾಗಿ ಮನೆಮಠ ಎಲ್ಲಾ ಧಾನ ಮಾಡಿ, ಇನ್ನೂ ಅಳದುಳದದ್ದನ್ನು ವಿಹಾರಕ್ಕೆ ದಾನ ಮಾಡಲು ಹೊರಟಾಗ ಹೆಂಡತಿಯಾದ ಲಲಿತಾಂಬ ಅದನ್ನು ತಡೆದು ಹೊಳೆ-ಬಾವಿಗೆ ಹಾರಿ ಪ್ರಾಣ ಬಿಡ್ಡುತ್ತೇನೆ. ಎನ್ನುತ್ತಾಳೆ, ಅವನು ಹೆದರಿ ಈಗ ಶರಣನಾಗಿದ್ದಾನೆ. 'ಶೀಲ'ನು ಬ್ರಾಹ್ಮಣನಾಗಿದ್ದರೆ ತನ್ನ ಮಗಳು 'ಕಲಾವತಿ'ಗೆ ಕೊಡುತ್ತಿರಲಿಲ್ಲ. ಶರಣನಾಗಿದ್ದರೂ ಕೊಡುತ್ತಿರಲಿಲ್ಲ. ಅವನು ಕೆಳಜಾತಿಯವನಾದ್ದರಿಂದಲೇ ಕೊಡುತ್ತಿರುತ್ತಾನೆ.

ಇತ್ತ ಹರಳಯ್ಯನೂ ತನ್ನ ಮಗನು ಉನ್ನತ ಜಾತಿಯ ಹೆಣ್ಣನ್ನು ಮಧುವೆ ಮಾಡಿಕೊಳ್ಳುವುದು ಹೆಮ್ಮೆಯ ಸಂಗತಿ, ತನಗಾದರೆ ಉನ್ನತ ಜಾತಿಯವರ ಕೂಟ ಕನಸಲ್ಲು ಅಸಾಧ್ಯವಾಗಿತ್ತು. ಎಂದಾಗ ಗಂಗಾಂಬಿಕೆಯು 'ಗಂಡಸರಿಗೆ ಹೆಣ್ಣು ಅಂದರೆ ದಾರಿಯಲ್ಲಿ ನೇತಾಕಿದ ಮಾವಿನ ಹಣ್ಣು ಎಂದು ಕೊಂಡಿದ್ದಾರೆ ಎನ್ನುತ್ತಾಳೆ'. ಗಂಡಿಗೆ ಹೆಣ್ಣಿನ ಬೆಲೆ ತಿಳಿಯದೇ ಸದಾ ತನ್ನ ತೊತ್ತು ಎಂದು ಭಾವಿಸುತ್ತರೆನ್ನುತ್ತಾಳೆ.

ಅಷ್ಟೊತ್ತಿಗೆ ಅಲ್ಲಿಗೆ ಏಳೆಂಟು ಶರಣರು ಬಂದು ಊರಲೆಲ್ಲ ಅಂತರ್ಜಾತಿ ವಿವಾಹದ ಸುದ್ದಿ ತಿಳಿದು ಶರಣರೆಲ್ಲ ಇದರಿಂದ ಸಂತೋಷಗೊಂಡರೆ ಬ್ರಾಹ್ಮಣರೆಲ್ಲ ಕೊಪಾವಿಷ್ಟರಾಗಿದ್ದಾರೆ ಎನ್ನುತ್ತಾರೆ. ಹೀಗೆ ಇನ್ನೂ ಅನೇಕ ಜನ ಬಂದು ಹರಳಯ್ಯ-ಮಧುವರಸ, ಕಲ್ಯಾಣಿ-ಲಲಿತಾಂಬೆಯರಿಗೆ ಅಭಿವಂದಿಸುತ್ತಾ ಮಹಾಮನೆಯು ಶರಣರಿಂದ ತುಂಬಿ ಹೋಗುತ್ತದೆ. ತಾವೆಲ್ಲ ಬಸವಣ್ಣನಿಂದ ಆಶೀರ್ವಾದ ಪಡೆಯಲು ಬಂದಿದ್ದೇವೆ ಎನ್ನುತ್ತಾರೆ. ಈ ಮಧ್ಯೆ ಹಿಂದಿನ ಪ್ರಸ್ತಾಪವನ್ನು ಮಾಡುತ್ತಾ ಆಶೀರ್ವಾದ ಮಾಡುವಾಗ ಬಸವಣ್ಣನ ಕೈ ಹಿಂದಕ್ಕೆ ಹೋಯಿತಂತೆ ಆ ನಂತರ ಆಶೀರ್ವಾದ ಮಾಡಿದನಂತೆ ಎನ್ನುತ್ತಾನೆ.

ಬಿಜ್ಜಳನು ಜನರೆಲ್ಲಾ ನೆರೆದಿರುವ ಮಹಾಮನೆಗೆ ಬರುತ್ತಾನೆ. ಆಗ ಬಸವಣ್ಣನು ವಂದಿಸಿ ಹೇಳಿಕಳಿಸಿದ್ದರೆ ತಾನೇ ಬರುತ್ತಿದ್ದೆನಲ್ಲ ಎಂದು ವಿನಯವಾಡುತ್ತಾನೆ. ಅದಕ್ಕೆ ಬಿಜ್ಜಳನು 'ತಾವು ಶರಣ ಗೋಃಷ್ಠಿಯಲ್ಲಿ ಮೈಮರೆತಿರುತ್ತೀರಿ, ಏಳುತೀರೋ, ಇಲ್ಲೋ ಅಂತ ತಾನೇ ಬಂದೆ ಎನ್ನುತ್ತಾನೆ', ಅಷ್ಟೊತ್ತಿಗೆ ಶರಣರೆಲ್ಲ ಲಿಂಗಾರ್ಚನೆಗೆ ಹೊತ್ತಾಯಿತೆಂದು ಹೊರಡುತ್ತಾರೆ. ಇತ್ತ ಗಂಗಾಂಬಿಕೆ ಬಂದು ಬಿಜ್ಜಳನ ಹೆಂಡತಿ 'ರಂಭಕ್ಕನ' ಯೋಗಕ್ಷೇಮ ವಿಚಾರಿಸುತ್ತಾಳೆ. ಆಗ ಅವಳಿಗೆ ಖಾಯಿಲೆ ಗುಣ ಆದಂತೆ ಆಗಿ  ಪುನಃ ಮರುಕಳಿಸುತ್ತದೆ, ವಾಸಿ ಆಗಿಲ್ಲ ಎನ್ನುತ್ತಾನೆ.

ಅಷ್ಟೊತ್ತಿಗಾಗಲೇ ಹರಳಯ್ಯ, ಮಧುವರಸ, ಲಲಿತಾಂಬ, ಮಧುವೆ ಬಗ್ಗೆ ಪ್ರಸ್ತಾಪಿಸುತ್ತಾ ಇದರಿಂದ ಬೇರೆಯವರಿಗೆ ದುಃಖವೇ ಆಗುತ್ತದೆಂದು ಮಾತಾಡುತ್ತಾರೆ. ಹರಳಯ್ಯನು ಹಣೆ ಬರಹ ಇದ್ದಹಾಗೆ ಆಗುತ್ತದೆ ಎನ್ನುತ್ತಾನೆ. ಆಗ ಬಸವಣ್ಣನು ಹರಳಯ್ಯನಿಗೆ 'ಶೀಲ ಮತ್ತು ಕಲ್ಯಾಣಿ' ಮದುವೆ ಆದ ಮೇಲೆ ಅವರಿಬ್ಬರನ್ನು ಬೇರೆ ಊರಿಗೆ ಕಳುಹಿಸಬೇಕೆ ಎನ್ನುತ್ತಾನೆ.

ಇತ್ತ ಬಿಜ್ಜಳನು ತಾನು ಓಲಗ ಮುಗಿಸಿ ಅರಮನೆಗೆ ಹೊರಟಿರುವಾಗ ಬ್ರಾಹ್ಮಣರು ಬಂದು ಈ ಮದುವೆ ನಿಲ್ಲಿಸಬೇಕೆಂದು ಎದೆಹೊಡೆದು ಕೊಳ್ಳುತ್ತಿದ್ದಾರೆ ಅದಕ್ಕೆ ಬಸವಣ್ಣನನ್ನು ನೋಡಲು ಬಂದೆ ಎನ್ನುತ್ತಾನೆ. ಅದಕ್ಕೆ ಬಸವಣ್ಣನು ಶರಣ  ಹರಳಯ್ಯನ ಮಗನಿಗೂ ಮತ್ತೊಬ್ಬ ಶರಣ ಮಧುವರಸನ ಮಗಳಿಗೂ ಪರಸ್ಪರ ಒಪ್ಪಿ ಮದುವೆ ನಡೆದರೆ ಬೇಡ ಎನ್ನಲು ನಾನ್ಯಾರು ನನಗೆ ಆ ಅಧಿಕಾರವೂ ಇಲ್ಲ ಎನ್ನುತ್ತಾನೆ.

ಬಿಜ್ಜಳನು ಬಸವನಿಗೆ ನೀನು ಮದುವೆ ಬೇಡ ಅಂದರೂ ಆ ಶರಣರು ನಿನ್ನ ಮಾತಂತೆ ಮದವೆ ಮಾಡೇ ತೀರುತ್ತಾರೆ. ಈ ಮದುವೆ ನಡೆದರೆ ಬ್ರಾಹ್ಮಣರು ಲಗ್ನ ಮಂಟಪವನ್ನು ರಣರಂಗ ಮಾಡಿ ಕಲ್ಯಾಣದಲ್ಲಿ ಹೆಣ ಬೀಳಿಸುತ್ತಾರೆ. ಆದ್ದರಿಂದ ನನ್ನ ರಾಜಾಜ್ಞೆಯಿದೆ. ಈ ಅಂತರ್ಜಾತಿ ವಿವಾಹ ನಡೆಯಬಾರದು ಎನ್ನುತ್ತಾನೆ.

ಬಸವಣ್ಣನು ಯಾರೋ ಮಾಡಿದ ತಪ್ಪಿಗೆ ಇನ್ನಾರಿಗೋ ಶೂಲಕ್ಕೇರಿಸುವುದು ಸರಿಯಲ್ಲ. ಹಾವಿಗೆ ಹೊಟ್ಟೆ ಕಿಚ್ಚು ಬಂದರೆ ಹಕ್ಕಿ ಹಾರಾಡಬಾರದೇಕೆ, ಬ್ರಾಹ್ಮಣರಿಗೆ ಕೋಪ ಬರುತ್ತದೆಂದು ಈ ಮದುವೆ ನಡೆಯಬಾರದೇಕೆ? ಎನ್ನುತ್ತಾ ಹೀಗೆ ನೀವು ಈ ಮದುವೆ ತಡೆದರೆ ನೀವು 'ರಾಜಾಜ್ಞೆ' ಹಿಂತೆಗೆದುಕೊಳ್ಳುವವರಿಗೆ ಅರಮನೆಯಲ್ಲಿ ಧರಣಿ ಕೂರುತ್ತೇನೆ ಎನ್ನುತ್ತಾನೆ.

ಬಿಜ್ಜಳನಿಗೆ ಈ ಧರಣಿಯ ಪರಿಣಾಮದ ಅರಿವಾಗುತ್ತದೆ. ಬಸವಣ್ಣ ಧರಣಿಗೆ ಹೊರಟರೆ ಇಡೀ ಕಲ್ಯಾಣದಲ್ಲಿರುವ ೯೬ ಸಾವಿರ ಶರಣರು ತಮ್ಮ ಕೆಲಸ ಕಾರ್ಯಬಿಟ್ಟು ಅರಮನೆ ಸೇರಿದರೆ ಕಲ್ಯಾಣದ ಪೇಟೆಯಲ್ಲಿ ವ್ಯಾಪಾರ-ವ್ಯವಹಾರದ ವಹಿವಾಟು ನಡೆಯದೆ ಪುನಃ ರಾಜ ಬೊಕ್ಕಸಕ್ಕೆ ಹಾನಿಯಾಗುತ್ತದೆ. ಒಂದು ಮಧುವೆಗಾಗಿ ಇಷ್ಟು ಹಾನಿಯಾಗುವುದು ಬೇಡ, ೧೬ವರ್ಷ ಭಂಡಾರಿಯಾದ (ಕರಣಿಕ) ನೀನೂ ನನ್ನನ್ನು ಅರ್ಥಮಾಡಿಕೊಂಡಿಲ್ಲ. ನೀವೆಲ್ಲ ನನ್ನನ್ನು ಕೈಗೊಂಬೆಯಾಗಿಸಿ ನಿಮ್ಮಗಿಷ್ಟ ಬಂದಂತೆ ನಡೆದುಕೊಂಡರೆ ನಿಮ್ಮನ್ನೆಲ್ಲ ತಿಗಣೆ ಹೊಸಕಿದ ಹಾಗೆ ಹೊಸಕುತ್ತೇನೆ ಎನ್ನುತ್ತಾನೆ.

ಕೊನೆಗೆ ಬಸವಣ್ಣನಿಗೆ ನೀವೂ ಆ ಬ್ರಾಹ್ಮಣರು ಈ ಲಗ್ನದಿಂದಾಗಿ ಹೊಡೆದಾಡಿ ಸಾಯಿರಿ ನನಗೇನು ಈ ಸಮಯಕ್ಕೆ ಸರಿಯಾಗಿ ನಾನು ಹೊರ ಸೀಮೆಯಲ್ಲಿ ಯುದ್ಧಕ್ಕೆ ಹೋಗುತ್ತೇನೆ. ಆ ನಂತರ ಬಂದು ಸತ್ತ ನಿಮ್ಮಹೆಣಗಳನ್ನು ಎಣಿಸುತ್ತೇನೆ ಎಂದು ಹೊರಡುತ್ತಾನೆ. ಮುಂದೇನಾದರು ಆದರೆ ಅದಕ್ಕೆ ತಾನು ಜವಾಬ್ದಾರನಲ್ಲ ಈ ಮದುವೆಗೆ ತಾನು ಅಡಡಿ ಮಾಡುವುದಿಲ್ಲವೆಂದು ರಾಜಾಜ್ಞೆ ಹಿಂಪಡೆಯುತ್ತಾನೆ. ಬಸವಣ್ಣ ನೀನು ಕಠಿಣ ಹೃದಯದವನು ಜಂಗಮತ್ವಕ್ಕಾಗಿ, ನನ್ನ ಗೆಳತನ, ನಿಷ್ಠೆ, ಪ್ರೀತಿ, ಎಲ್ಲ ಬಿಡುತ್ತೀಯ ನೀನು ಎಂದು ಕಲ್ಲಪ್ಪನ ಜೊತೆ ಹೊರಟು ಹೋಗುತ್ತಾನೆ.

ಇತ್ತ ಶರೂರ ಜಗ್ಗಣ್ಣ ತಮ್ಮ ಶರಣರ ಸಂಖ್ಯೆ ಹೆಚ್ಚಿಸಬೇಕೆಂದು ಸಿದ್ಧತೆ ನಡೆಸುತ್ತಾನೆ. ಬಸವಣ್ಣನು ಈಗ ವೀರಶೈವ ಸಮಾಜ ತೀವ್ರವಾಗಿ ಬೆಳೆಯುತ್ತಿದೆ ಹಾಗೆ ಶತ್ರುಗಳು ಬೆಳೆಯುತ್ತಿದ್ದಾರೆ ಹುಶಾರಾಗಿರ ಬೇಕೆನ್ನುತ್ತಾನೆ. ಆಕ್ರೋಶಗೊಂಡ ಜಗ್ಗಣ್ಣನನ್ನು ಬಸವಣ್ಣ ಸಮಾಧಾನ ಮಾಡಿ ಕಳಸುತ್ತಾನೆ. 'ಇವರೆಲ್ಲ ನಮ್ಮವರೇ ಎಂದಿನಿಸು ಕೂಡಲಸಂಗಮದೇವ' ಎನ್ನುತ್ತಾ ಎಲ್ಲರನ್ನು ಆ ರಾತ್ರಿ ಬೀಳ್ಕೊಟ್ಟ ನಂತರ ಬೆಳಗ್ಗೆಯಿಂದ ಕಾಯುತ್ತಿದ್ದ ಕುಕ್ಕೇಶೆಟ್ಟರು ಬರುತ್ತಾರೆ.

ಆರನೆಯ ದೃಶ್ಯವು ಕಲ್ಯಾಣದ ವೇಶ್ಯಾವಟಿಕೆಯಲ್ಲಿ ನಡೆಯುತ್ತದೆ. ದಾಮೋದರ ಬಟ್ಟನು ಚಾಡಿ ಕೋರನಾಗುವ ತಂದೆ-ಮಕ್ಕಳ ನಡುವೆ ವಿಕಸ ತಂದೊಡ್ಡುವ ದೃಶ್ಯ ಇದಾಗಿದೆ.

ಬಿಜ್ಜಳನ ತನ್ನ ಮಗನಾದ ಸೋವಿದೇವನು ಸದಾ ಹೆಂಡ ಕುಡಿದು ವೇಶ್ಯೆಯಾದ ಇಂದ್ರಾಣಿಯ ಮನೆಯಲ್ಲಿ ಸದಾ ಲೋಲುಪತೆಯಲ್ಲೇ ತೊಡಗಿರುತ್ತಾನೆ. ಇತ್ತ ಅಂತರ್ಜಾತಿ ವಿವಾಹವನ್ನು ತಡೆಯಬೇಕು, ಇದು ಸಕಾಲ ಬ್ರಾಹ್ಮಣರ ನೆರವು ಪಡೆದು ಬಿಜ್ಜಳನನ್ನು ಅಧಿಕಾರದಿಂದಿಳಿಸಿ ಯುವರಾಜನಾದ ತಾನು ರಾಜನಾಗಬೇಕೆಂದು ಆಮಿಷ ತೋರಿಸುತ್ತಾನೆ. ಪಾನ ಮತ್ತನಾದ ಸೋವಿದೇವನಿಗೆ ನಾನೇಳುವುದು ಒಂದೂ ಅರ್ಥವಾಗದು ಅದಕ್ಕೆ ಇವನ ಮೈ ಮೇಲೆ ನೀರು ಸುರಿದು ಎಚ್ಚರಗೊಳಸಬೇಕೆನ್ನುತ್ತಾನೆ.

ನಂತರ ಚರ್ಮಗಾರರ ಹುಡುಗ, ಬ್ರಾಹ್ಮಣರ ಹುಡುಗಿ ಈ ಪ್ರತಿಲೋಮದ ವಿವಾಹದಿಂದ ಕಲ್ಯಾಣ ನಗರವೇ ಕತ್ತರಿಸಿ ಹೋಗಿದೆ. ನೀವು ಇದಕ್ಕೆ ಬಿಡಬಾರದು ಸೊನ್ನಲಿಗೆಯಿಂದ ನೂರು ಮಲ್ಲರು, ತಮಿಳು ನಾಡಿನಿಂದ ಭಂಟರು, ಈ ಮದುವೆ ತಡೆಯಲು ಬಂದು ಕನ್ನಮ್ಮನ ಛತ್ರದಲ್ಲಿದ್ದಾರೆ ಅವರ ಜೊತೆಗೂಡಿ ಈ ಮಧುವೆ ನಿಲ್ಲಿಸು ಎನ್ನುತ್ತಾನೆ.

ಶರಣರೂ ಕೂಡ ಎಲ್ಲರ ಮನೆಯಲ್ಲೂ ಆಯುಧ ಸಂಗ್ರಹಿಸಿ ಹೋರಾಟಕ್ಕೆ ಸಿದ್ಧರಾಗಿದ್ದಾರೆ ಎನ್ನುತ್ತಿರುವಾಗಲೇ ಮದುವೆಯ ಮೆರವಣಿಗೆ ಊರಲ್ಲಿ ನಡೆಯುತ್ತಿರುತ್ತದೆ. ಈ ಆಡಂಬರದ ಮದುವೆ ಸರಿಯಿಲ್ಲವೆಂದು ವೇಶ್ಯೆ ಇಂದ್ರಾಣಿ ಆತಂಕ ವ್ಯಕ್ತಪಡಿಸುತ್ತಾಳೆ.

ಆಗ ದಾಮೋದರ ಭಟ್ಟನು ಋಗ್ವೇದದ ಪುರುಷ ಸೂಕ್ತ ಹೇಳುತ್ತಾನೆ: ವರ್ಣವ್ಯವಸ್ಥೆಗೆ ಮೂಲ ಆ ಪುರುಷನ ಅಂಗಾಂಗ ಬ್ರಾಹ್ಮಣ ಆ ಪುರುಷನ ಮುಖದಿಂದಲೂ, ಶೂದ್ರನು ಪಾದದಿಂದಲೂ ಹುಟ್ಟಿದ್ದಾನೆ. ಆದ್ದರಿಂದ ಈ ಅಂತರ್ಜಾತಿ ಮದುವೆ ಪುರುಷನ, ಶರೀರದ ಮೇಲೆ ನಡೆದಿರೋ ಅತ್ಯಾಚಾರ ಎನ್ನುತ್ತಾನೆ. ಇದು ಪ್ರಮಾದ, ಶೋಚನೀಯ ಎನ್ನುತ್ತಾನೆ. ಆಜ್ಞಾನಿಯಾದವನು ಶೂದ್ರನೂ ಅಲ್ಲ, ದರ್ಪಾಂಧ ನಾದವನು ಪಂಚಮನೂ ಅಲ್ಲ, ನಿಜವಾದ ಬ್ರಾಹ್ಮಣನಾಗಬೇಕಾದರೆ ಪ್ರತಿಭೆ, ಯಶಸ್ಸು, ರೂಡಿ, ಯೌವ್ವನ ಎಲ್ಲ ಇರೋ ಮೇಧಾವಿ ಎನ್ನುತ್ತಾನೆ.

೩ನೇ ಅಂಕ: ದೃಶ್ಯ-೭: ಅರಮನೆಯ ಹೊರಗಿನ ಸದನದಲ್ಲಿ ಕಲ್ಲಪ್ಪ ಕುಳಿತಿರುವಾಗ ಸೋವಿದೇವನು ಬಂದು ಮೆಲು ಧ್ವನಿಯಲ್ಲಿ ಕಲ್ಲಪ್ಪನನ್ನು ಕೂಗಿ ಕರೆಯುತ್ತಾನೆ. ಆನಂತರ ದಾಮೋದರ ಭಟ್ಟನು ಬಂದು ಕಲ್ಲಪ್ಪನನ್ನು ಎಚ್ಚರಿಸುತ್ತಾನೆ. ಕಲ್ಲಪ್ಪ ಬಿಜ್ಜಳನ ಆಪ್ತರಕ್ಷಕ, ಆಪ್ತಸೇವಕನಾಗಿದ್ದರೂ ಸೋವಿದೇವ ಕರೆದಿದ್ದರಿಂದ ಒಲ್ಲದ ಮನಸ್ಸಿಂದಲೇ ರಾಜನನ್ನು ಬಿಟ್ಟು ಯುವರಾಜ ಸೋವಿದತ್ತ ನತ್ತ ಹೊರಟಾಗ ನಾಲ್ಕೈದು ಜನ ಆಕ್ರಮಣ ಮಾಡಿ ತಲೆಗೆ ಬಲವಾದ ಏಟುಕೊಟ್ಟು ಕೆಳಗುರುಳಿಸುತ್ತಾರೆ. ದಾಮೋಧರ ಭಟ್ಟ ಎಲ್ಲರೂ ಅವಿತುಕುಳತುಕೊಳ್ಳಲು ಹೇಳಿ ತಾನು ಮತ್ತು ಒಬ್ಬ ಹುಡುಗ ಮಾತ್ರ ಬಿಜ್ಜಳನ ಅಂತಃಪುರ ಪ್ರವೇಶಿಸುತ್ತಾನೆ. ಬಂಕಣ್ಣ ಎಂಬ ೧೪-೧೫ ವರ್ಷದ ಹುಡುಗ ರಾಜರ ಸ್ನಾನ ಆಗಿ ಪೂಜೆಗೆ ಕುಳಿತಿರುವಂತೆ ಹೇಳುತ್ತಾನೆ. ಅಷ್ಟರಲ್ಲೇ ಅಡಗಿ ಕುಳಿತಿದ್ದವನೊಬ್ಬ ಆ ಬಂಕಣ್ಣನ ಬಾಯಿ ಬಿಗಿ ಹಿಡಿದು ಬೇರೆಡೆ ಎಳೆದೊಯ್ಯುತ್ತಾನೆ. ಅವನ ಕೆಲಸವನ್ನ ತನ್ನ ಜೊತೆಗಿದ್ದ ಹುಡುಗ ಮರಿಯಪ್ಪನಿಗೆ ವಹಿಸುತ್ತಾನೆ.

ಇತ್ತ ರಾಜನ ಸೇವಿಕ ರುದ್ರಪ್ಪನ ಜಾಗದಲ್ಲಿ ಕೊಟ್ರಪ್ಪ ಎಂಬುವವ ನನ್ನ ನೇಮಿಸುತ್ತಾರೆ. ನಂತರ ಓಲಗದ ಉಡುಪು, ಕಿರೀಟ ತೆಗೆದುಕೊಂಡು ಬಾ ಎಂದು ತನ್ನ ಸೇವಕ ರುಕುಮಯ್ಯನನ್ನ ಕೂಗಿ ಕರೆಯುತ್ತಾನೆ. ಆದರೆ ಅವನನ್ನು ಬದಲಾಯಿಸಿರುತ್ತಾರೆ. ಆತ್ಮೀಯ ಕಲ್ಲಪ್ಪ ಎಂದಾಗ ಅವನೂ ಬಂದಿಲ್ಲಾ ಎನ್ನುತ್ತಾನೆ. ಇತ್ತ ದಾಮೋಧರ ಭಟ್ಟನ ಕುತಂತ್ರ ಬಿಜ್ಜಳನಿಗೆ ತಿಳಿದುಹೋಗುತ್ತದೆ. ಇದು 'ಸ್ವಾಮಿದ್ರೋಹ' ಎಂದು ಕೂಗಿ ಕೊಳ್ಳುತ್ತಾನೆ. ತನ್ನ ಕತ್ತಿ ಹುಡುಕುತ್ತಾನೆ ಅದನ್ನು ಕದ್ದೊಯ್ದಿರುತ್ತಾರೆ. ಬಾಗಿಲಿಗೆ ಚಿಲಕ ಹಾಕಿ ಬಿಜ್ಜಳನನ್ನು ಸೋವಿದೇವ ಕೂಡಿ ಹಾಕಿರುವ ವಿಷಯವನ್ನು ಹೆಂಡತಿ ರಂಭಾವತಿಗೆ ತಿಳಿಸುತ್ತಾನೆ. ತನ್ನ ಮಗ ಮನೆಯೊಳಗಿನ "ಹಾವು" ಎನ್ನುತ್ತಾನೆ. ಇಷ್ಟರಲ್ಲಿ ಈರವ್ವನೂ ಓಡಿಬರುತ್ತಾಳೆ. ದಾಮೋಧರ ಭಟ್ಟ ಚಪ್ಪಾಳೆ ಹೊಡೆಯುತ್ತಿದ್ದ ಹಾಗೆ ಅವಿತುಕೊಂಡವರು ಹೊರಬರುತ್ತಾರೆ. ಸೋವಿದೇವನೂ ಬಿಜ್ಜಳನ ಓಲಗದ ವಸ್ತ್ರ, ಕಿರೀಟಧರಿಸಿ ಪ್ರವೇಶಿಸುತ್ತಾನೆ. ತಾಯಿಯಾದ ರಂಭಾವತಿ ಮಗನ ಈ ವರ್ತನೆಯನ್ನು ಖಂಡಿಸುತ್ತಾಳೆ. ಆಗ ಬಿಜ್ಜಳ ಅವಳನ್ನು ಸಮಾಧಾನ ಮಾಡಿ ಒಳಗೆ ಕಳುಹಿಸುತ್ತಾನೆ.

ಸೋವಿದೇವನು ಸಮಾಧಾನ ಮಾಡಲು ಹೋದ ತಂದೆ ಬಿಜ್ಜಳನನ್ನು ಕಾಲಿನಿಂದ ಜಾಡಿಸಿ ಹೊಡೆಯುತ್ತಾನೆ. ಕೆಳಗೆ ಬಿದ್ದ ಬಿಜ್ಜಳನು ಕಲ್ಲಪ್ಪನ ಸಾವಿನ ಸುದ್ದಿ ಕೇಳಿ ದುಃಖಿಸುತ್ತಾನೆ. ಆಗ ಕಲ್ಲಪ್ಪ 'ಸ್ವಾಮಿನಿಷ್ಠೆ'ನಾದ್ದರಿಂದ ಕೊಲ್ಲಲೇ ಬೇಕಾದ ಅನಿವಾರ್ಯತೆಯನ್ನು ಭಟ್ಟನು ಹೇಳುತ್ತಾನೆ. ಜೊತೆಗೆ ತಾವು ಕಳಚೂರ್ಯರ ವಂಶದ ಉಪ್ಪುತಿಂದಿರುವುದರಿಂದ ಈಗ ರಾಜ ಬಿಜ್ಜಳನು ತಾನಿನ್ನು ವಯಸ್ಸಿನಲ್ಲಿ ಗಟ್ಟಿಯಾಗಿರುವಾಗಲೇ ವಾನ ಪ್ರಸ್ಥಾಶ್ರಮಕ್ಕೆ ಹೋಗಿದ್ದಾನೆಂದರೆ ಜನ ನಗುತ್ತಾರೆನ್ನುತ್ತಾನೆ. ಅಲ್ಲದೆ ತನ್ನ ಉಳಿದ ನಾಲ್ಕು ಹುಡುಗರಿಗೆ ತಿಳಿದರೆ ನಿಮ್ಮನ್ನು ಸುಮ್ಮನೇ ಬಿಡುವುದಿಲ್ಲ. ದಂಡೆತ್ತಿ ಬರುತ್ತಾರೆ ಆದ್ದರಿಂದ ತನಗೆ ವಿಷಹಾಕಿ ಕೊಲ್ಲಬೇಡಿ ಎನ್ನುತ್ತಾನೆ. ಇದರಿಂದ ಕಲ್ಯಾಣದ ಜನ ಬಂಡಾಯ ಹೇಳುತ್ತಾರೆ ಹೀಗೆ ಎಷ್ಟು ದಿನ ನನ್ನನ್ನು ಕೂಡಿಹಾಕಲು ಸಾಧ್ಯ ಎನ್ನುತ್ತಾನೆ.

ಆಗ ದಾಮೋಧರ ಭಟ್ಟನು ಬ್ರಾಹ್ಮಣರಿಗೂ ಶರಣರಿಗೂ ನಡೆದ ವೈಶಮ್ಯದ ಜಗಳದಲ್ಲಿ ಪರಸ್ಪರ ಕೊಚ್ಚಿ ಸಾಯುತ್ತಾರೆ. ಇನ್ನೂ ನಿಮ್ಮನ್ನು ಉಳಿಸುವ ಮಾತೇ ಇಲ್ಲ ಎನ್ನುತ್ತಾನೆ. ಅಂತರ್ಜಾತಿ ವಿವಾಹದ ದಿನವೇ ಶರಣರೆಲ್ಲ ಸಾಯುತ್ತಿದ್ದರು ಆದರೆ ನೀವು ಅದಕ್ಕೆ ರಕ್ಷಣೆ ಕೊಟ್ಟಿದ್ದರಿಂದ ಅವರು ಬದುಕುಳಿದರು ಎನ್ನುತ್ತಾನೆ. ಅದಕ್ಕೆ ಬಿಜ್ಜಳನು ನನ್ನ ಬಸವಣ್ಣ ಪವಾಡ ಪುರುಷನಾದ್ದರಿಂದ ಅಹಿತಕರ ಘಟನೆ ನಡೆಯದೆನ್ನುತ್ತಾನೆ. ಬ್ರಾಹ್ಮಣ ಹುಡುಗಿ, ಪಂಚಮರ ಹುಡುಗನ ಮದುವೇ ಪವಾಡ ಎಂದು ಬಿಜ್ಜಳ ಎಂದರೆ, ಅದು ನಿಸರ್ಗ ದ್ರೋಹ ಎಂದು ಭಟ್ಟ ವಾದಿಸುತ್ತಾನೆ. ಅಲ್ಲಿಗೆ ಈ ಅಂಶ ಮುಗಿಯುತ್ತದೆ.

ದೃಶ್ಯ-೮: ಈ ದೃಶ್ಯವು ಮಹಾಮನೆಯದಾಗಿದೆ ಜನರೆಲ್ಲ ನೆರೆದಿರುವಾಗ ಬಿಜ್ಜಳನು ಶೀಲ-ಕಲಾವತಿ ಲಗ್ನದಿಂದ ರಕ್ತಪಾತವಾಗದ ಹಾಗೆ ರಾಜ ಬಿಜ್ಜಳನು ತಡೆದಿದ್ದರಿಂದ ಕೃತಜ್ಞತೆ ಸಲ್ಲಿಸುತ್ತಾನೆ. ಗುಪ್ತರಕ್ಷಣೆಯನ್ನ ರಾಜ ಕೊಟ್ಟರು ಎನ್ನುತ್ತಾನೆ. ಆಗ ಶರಣರು ಇದನ್ನು ವಿರೋಧಿಸುತ್ತಾರೆ, ರಾಜ ಇದನ್ನು ತಡೆಯೋದಕ್ಕೆ ತಾವೇನು ಕಳ್ಳತನ ಮಾಡಲಿಲ್ಲ. ಯಾರಾದರೂ ತಡೆಯಲು ಬಂದಿದ್ದರೆ ತಾವು ಕದನಕ್ಕೆ ಸಿದ್ಧವಾಗೇ ಇರುವುದಾಗಿ ತಿಳಿಸಿ ಈ ಮದುವೆಯ ಯಶಸ್ವಿಗೆ ಶರಣರು ಕಾರಣವೇ ಹೊರತು ರಾಜನಲ್ಲ ಎನ್ನುತ್ತಾರೆ.

ಆಗ ಬಸವಣ್ಣನು ಶರಣರಿಗೆ ರಕ್ಷಣೆ ನೀಡಿದ ರಾಜ ಅದೇ ನಿಮಿತ್ತವಾಗಿ ಸಂಕಟದಲ್ಲಿ ಬಂಧನದಲ್ಲಿದ್ದಾನೆ. ಅವರ ನೆರವಿಗೆ ಹೋಗಬೇಕೆನ್ನುತ್ತಾನೆ, ಆಗ ಶರಣರು ಈ ಮೊದಲು 'ಬಸವ-ಬಿಜ್ಜಳ'ರ ಸಂಬಂಧ ಮುರಿಯಿತೆಂದು ಹೇಳಿದ ಮಾತನ್ನು ನೆನಪಿಸುತ್ತಾನೆ. ಆಗ ಬಸವಣ್ಣನು ತಾನೂ ಈ ಮೊದಲು ತನ್ನ ವಚನಗಳಿಂದ ರಾಜರನ್ನ ಹಂಗಿಸಿ, ಬೈದಿದ್ದೀನಿ, ನನ್ನನ್ನು ಬೈಯ್ಯೋ ಅಧಿಕಾರವೂ ರಾಜರಿಗಿದೆ ಎನ್ನುತ್ತಾನೆ. ನನ್ನನ್ನು ಬಿಟ್ಟರೆ ರಾಜನಿಗಿನ್ಯಾರು ಇಲ್ಲ ಎನ್ನುತ್ತಾನೆ. ಮಧುವರಸನು ಕಷ್ಟಪಟ್ಟು ಕಾನೂನು ಮೀರಿ ಅಂತರ್ಜಾತಿ ವಿವಾಹ ಮಾಡಿಸಿ ಜಗತ್ತೆ ತಲ್ಲಣಗೊಂಡಿರುವ ಶ್ರೇಯಸ್ಸನ್ನು ರಾಜನಿಗೆ ಒಪ್ಪಿಸಲಾಗದೆಂದಾಗ ಮಾಚಯ್ಯನು ಎಲ್ಲಾ ಶರಣರು ಕಡ್ಡಾಯವಾಗಿ ಅರಮನೆಗೆ ಮುತ್ತಿಗೆ ಹಾಕಬೇಕೆಂದು ಹೇಳಿ ಇಲ್ಲ ಅಂದರೆ ಪವಾಡ ಶಿಶು ಪ್ರತ್ಯಕ್ಷ ಆಗಿ ಎಲ್ಲರೂ ಅರಮನೆಗೆ ಹೋಗಬೇಕೆಂದು ಹೇಳಿದೆ ಎಂದು ಹೇಳಿ ಎಂದು ಬಸವಣ್ಣನಿಗೆ ಹೇಳಿಕೊಡುತ್ತಾನೆ ಆದರೆ ಅವನು ಇದಕ್ಕೆ ಒಪ್ಪುವುದಿಲ್ಲ. ನಂತರ ಕಕ್ಕಯ್ಯ ಉಳಿದ ಶರಣರೆಲ್ಲ ಬಸವಣ್ಣನ ಮಾತಿನಂತೆ ಮರುದಿವಸ ಶಿವಾರ್ಚನೆಯ ನಂತರ ಅರಮನೆಗೆ ಮುತ್ತಿಗೆ ಹಾಕುತ್ತಾರೆ. ಇದರಲ್ಲಿ ಮುಂದಿನ ದಿನ ತಾನೂ ಲಿಂಗೈಕ್ಯವಾಗುವುದನ್ನು ಸೂಚ್ಯವಾಗಿ ಹೇಳುತ್ತಾನೆ.

ದೃಶ್ಯ-೯: ಈ ದೃಶ್ಯದಲ್ಲಿ ಶರಣರಾದ ಜಗದೇವ, ಮಲ್ಲಿಬೊಮ್ಮ, ಕಾಳಯ್ಯ ಇತರರು ರಾತ್ರಿಯಲ್ಲಾ ತಾವೆಲ್ಲ ಒಂದೇ ಜಾತಿ ಎಂಬುದನ್ನು ಸಾರಿ ಹೇಳುತ್ತಾರೆ. ಇದಕ್ಕೆ ವಿರೋಧಿಸುವವರನ್ನ ಸದೆ ಬಡಿಯಲು ಕತ್ತಿ, ಗುರಾಣಿ, ಭರ್ಜಿ ಇತ್ಯಾದಿಗಳನ್ನು ಸಿದ್ಧಗೊಳಿಸುತ್ತಿರುತ್ತಾರೆ. ಜಗದೇವನು ತಾವು ಒಬ್ಬರೊಳಗೊಬ್ಬರು ರಕ್ತ ಬೆರೆಸಬೇಕೆಂದು ತಮ್ಮ ಕೈಗಳಿಗೆ ಕತ್ತಿಯಿಂದ ಗಾಯ ಮಾಡಿಕೊಂಡು ರಕ್ತ ಬೆರೆಸುತ್ತಾರೆ. ಇತರರೂ ಹಾಗೇ ಮಾಡುತ್ತಾರೆ ಇನ್ನು ಮುಂದೆ ಶಿವ ದ್ರೋಹಿಗಳ ನಿರ್ಮೂಲನೆಯೇ ತಮ್ಮ ಗುರಿ ಎಂದುಕೊಳ್ಳುತ್ತಾರೆ.

ರಾಚ್ಯನಿಗೆ ಲಂಚಕೊಟ್ಟರೆ ಅರಮನೆ ಪ್ರವೇಶಿಸಲು ರಹಸ್ಯ ನೆಲಮಾಳಿಗೆ ತೋರಿಸುತ್ತಾನೆಂದು ಮಲ್ಲಿಬೊಮ್ಮನು ಜಗದೇವನಿಗೆ ಹೇಳುತ್ತಾನೆ. ಅಷ್ಟರಲ್ಲಿ ಬ್ರಾಹ್ಮಣನಾದ ಜಗದೇವನ ಹೆಂಡತಿ ಅವನನ್ನು ಕರೆಯಲು ಬರುತ್ತಾಳೆ. ಅವನ ತಾಯಿ ಕಾಯಲೆಯಿಂದ ಹಾಸಿಗೆ ಹಿಡಿದಿದ್ದು, ನೆರೆಹೊರೆಯವರಾರು ಸಹಾಯಕ್ಕೆ ಬರುತ್ತಿಲ್ಲ. ಆದರೂ ಕೂಡ ಜಗದೇವ ಅವರ ನೆರವಿಗೆ ಹೋಗದೆ ತಾನು ಬ್ರಹ್ಮಚರ್ಯ ವ್ರತದಲ್ಲಿದ್ದು, ಧರ್ಮಕ್ಕಾಗಿ ತನ್ನನ್ನು ತಾನೇ ತ್ಯಾಗ ಮಾಡಿಕೊಂಡಿರುವುದಾಗಿ ಹೇಳುತ್ತಾನೆ. ದುಃಖದಲ್ಲಿಯೇ ಮೂಲೆಯಲ್ಲಿ ಕೂರುತ್ತಾನೆ.

ದೃಶ್ಯ-೧೦: ಇದು ಅರಮನೆಯ ರಾಣಿ ವಾಸದಲ್ಲಿ ನಡೆಯುತ್ತದೆ ಬಿಜ್ಜಳನ ರಾಣಿ ರಂಭಾವತಿಯು ಅತಿಕಾಯಿಲೆಯಿಂದ ಹಾಸಿಗೆ ಹಿಡಿದಿದ್ದಾಳೆ. ಇರವ್ವ, ಮರಿಯಪ್ಪ ಮತ್ತು ಬಿಜ್ಜಳ ಇವಳ ಈ ಸ್ಥಿತಿ ಕಂಡು ಶತಪತ ತಿರುಗುತ್ತಿರುತ್ತಾರೆ. ಹೀಗೆ ತಿರುಗುವುದು ಬೇಡ ಈ ರೀತಿ ತಿರುಗಿದರೆ ಬಸವಣ್ಣನೇನು ಬರುವುದಿಲ್ಲ ನಮ್ಮ ಮಗನೂ ಸರಿದಾರಿಗೆ ಬರುವುದಿಲ್ಲ ಎನ್ನುತ್ತಾಳೆ. ಅದಕ್ಕೆ ರೇಗಿದ ರಾಜನು ಬಸವಣ್ಣ ಏಕೆ ಬರಬೇಕು? ನನ್ನ ತಂಟೆಗೆ ಬರಬೇಡ ಎಂದು ನಾನೇ ಹೇಳಿದ್ದೇನೆಂದು ಹೇಳುತ್ತಾನೆ. ಆಗ ರಂಭಾವತಿಯು ಬಸವಣ್ಣ ಮತ್ತು ಬಿಜ್ಜಳನ ಆತ್ಮೀಯ ನಂಟನ್ನು ವಿವರಿಸಿದಾಗ ತಾನು ಅವನನ್ನು ಸ್ಮರಿಸಿದರೆ ತಪ್ಪೇನಿಲ್ಲ ಎನ್ನುತ್ತಾನೆ.

ಶರಣರಿಗೆ, ಬಸವನಿಗೆ ನಾನೀಗಾಗಲೇ ಸಾಕಷ್ಟು ಸಹಾಯ ಮಾಡಿದ್ದೇನೆ ಅವರು ತನಗೆ ಸಹಾಯ ಮಾಡಿದರೆ ಕಷ್ಟ ದೂರಾಗುತ್ತದೆ ಎನ್ನುತ್ತಾನೆ. ಬಸವಣ್ಣನನ್ನು ಬೈದದ್ದು ತನ್ನ ತಪ್ಪಾಯಿತೆಂದು ಪಶ್ಚಾತ್ತಾಪ ಪಡುತ್ತಾ ಹೆಂಡತಿಯ ಪಕ್ಕ ಕುಳಿತುಕೊಳ್ಳುತ್ತಾನೆ. ಅಷ್ಟೊತ್ತಿಗೆ ಹೊರಗಡೆ ಗುಳ್ಳವ್ವನು ಮರಿಯಪ್ಪನಿಗೆ ಬಸವಣ್ಣ ಶರಣರೊಡಗೂಡಿ ಅರಮನೆಯತ್ತ ಬರುವುದನ್ನು ತಿಳಿಸುತ್ತಾಳೆ. ಇದನ್ನು ಒಳಗಿನಿಂದ ಕೇಳಿದ ಬಿಜ್ಜಳನಿಗೆ ಅತೀ ಸಂತೋಷವಾಗುತ್ತದೆ.

ಮಹಾಮನಿಯಿಂದ ಬರುತ್ತಾನೆಂದರೆ ಪೂರ್ವದಿಕ್ಕಿನ ಶಿವಾಲಯದಿಂದಲೇ ಬರಬೇಕು ಎಂದು ತಿಳಿದು ಈರವ್ವನು ಪೂಜೆ ಮಾಡುತ್ತಿದ್ದ ಗೃಹದಲ್ಲಿ ಏಣಿಯಿಂದ ಹತ್ತು ನೋಡು ಎನ್ನುತ್ತಾನೆ ಆದರೆ ನಿಚ್ಚಣಿಗೆ ಇಲ್ಲದುದರಿಂದ ಮರಿಯಪ್ಪನು ಶಿವಾಲಯ ಪ್ರವೇಶಿಸಿ ತನ್ನ ಹೆಗಲ ಮೇಲೆ ನಿಂತು ಬಸವಣ್ಣ ಬರುವುದನ್ನು ತಿಳಿಸು ಎನ್ನುತ್ತಾನೆ. ರಾಜನ ಹೆಗಲ ಮೇಲೆ ನಿಲ್ಲುವುದನ್ನು ವಿವರಿಸುತ್ತಾನೆ. ರಾವಳಸಿದ್ದೇಶ್ವರನ ಗುಡಿಸುತ್ತ ಸಾವಿರಾರು ಸಂಖ್ಯೆಯ ಶರಣರೊಡಗೂಡಿ ಬಸವಣ್ಣ ಬರುತ್ತಿದ್ದಾನೆನ್ನುತ್ತಾನೆ.

ಅಷ್ಟರಲ್ಲಿ ದಾಮೋದರ ಭಟ್ಟ ಬಂದು ಕೆಳಜಾತಿಯವನು ಪೂಜಾ ಗೃಹದಲ್ಲಿ ಕಾಲಿಡಬಾರದೆಂದು ಮರಿಯಪ್ಪನನ್ನು ಬೈದು ಹೊಡೆಯಲು ಹೋಗುತ್ತಾನೆ. ಆಗ ಬಿಜ್ಜಳ ತಾನೇ ಹೇಳಿರುವುದಾಗಿ ಹೇಳುತ್ತಾನೆ. ಇದಕ್ಕೆ ಭಟ್ಟನು ಬಿಜ್ಜಳನಿಗೆ ತಾವು ಅಪ್ಪಣೆ ಕೊಟ್ಟಿದ್ದರೆ ಹೆಬ್ಬಾಗಿಲನ್ನೇ ತೆಗೆಸುತ್ತಿದ್ದೇ ಈಗಾಗಲೇ ಬಸವಣ್ಣ ಅರಮನೆ ಬಾಗಿಲಿಗೆ ಬಂದಿದ್ದಾನೆ ಎನ್ನುತ್ತಾನೆ. ಇದರಿಂದ ರಂಭಾವತಿಯೂ ಸಂತೋಷಗೊಳ್ಳುತ್ತಾಳೆ. ಈ ಭಟ್ಟನು ಬಸವಣ್ಣನಿಗೆ ಹೆದರಿಯೇ ಇಲ್ಲಿಗೆ ಬಂದಿರುವುದು ಎನ್ನುತ್ತಾನೆ. ಆಗ ಭಟ್ಟನು ಈಗಾಗಲೇ ೭೭೦ ಶರಣರು ಬಂದಿರುವುದರಿಂದ ಸೋವಿದೇವನಿಗೆ ರಾತ್ರಿಯೆಲ್ಲ ನಿದ್ದೆಯೇ ಇಲ್ಲ ಎನ್ನುತ್ತಾನೆ. ಇತ್ತ ಬಾಗಿಲು ತೆರೆದಾಗ ಬಸವಣ್ಣ ಮತ್ತು ಬಿಜ್ಜಳನು ಪರಸ್ಪರ ಮಾತನಾಡುತ್ತಾರೆ. ಬಿಜ್ಜಳನು ನಾನು ನಿನ್ನನ್ನು ಬಾ ಎಂದು ಅನ್ನನಿಲ್ಲ, ನೀನು ಬರುತ್ತೇನೆ ಎಂದೂ ಹೇಳಲಿಲ್ಲ. ಆದರೂ ಬಂದಿದ್ದೀಯಾ ನನ್ನ ಕೈಬಿಡಲಿಲ್ಲ ಬಸವಣ್ಣ ನೀನು ಎನ್ನುತ್ತಾನೆ. ಬಸವಣ್ಣ ರಾಜನ ಆರೋಗ್ಯ ವಿಚಾರಿಸಿದಾಗ ಏನೊಂದನ್ನು ಹೇಳದೆ ತನಗೇನು 'ಕೋಣ' ಇದ್ದಾಹಾಗೆ ಇದೇನೆ ಎನ್ನುತ್ತಾನೆ. ರಂಭಾವತಿಗೆ ಜ್ವರ, ಕೆಮ್ಮು, ಗಾಳಿ ಬದಲಾದ್ದರಿಂದ ಆರೋಗ್ಯ ಕೆಟ್ಟಿದೆ ಎನ್ನುತ್ತಾನೆ.

ಆಗ ಬಿಜ್ಜಳನು ತಾನು 'ಕಪ್ಪಡಿ ಸಂಗಮ್ಮಕ್ಕೆ' ಹೊರಟಿದ್ದೇನೆ. ಇನ್ನು ಎಂದು ಬರುತ್ತೇನೋ ಹೇಳಲಾಗದು ಶಿವ ನನ್ನನ್ನು ಕರೆದಿರುವುದರಿಂದ ನಾನು ಹೋಗಲೇ ಬೇಕು ಎನ್ನುತ್ತಾನೆ. ಬಿಜ್ಜಳ ರಾಜನೇ ನೀನೂ ಶಿವನನ್ನು ನಂಬು ಎಲ್ಲಾ ಒಳ್ಳೆಯದಾಗುತ್ತದೆ. ಎಂದು ಹೇಳಿ ಬಸವಣ್ಣ ಅಲ್ಲಿಂದ ಹೊರಟು ಹೋಗುತ್ತಾನೆ.

ಇತ್ತ ಬಿಜ್ಜಳನು ಹೆಂಡತಿಗೆ ರಂಭ ಮತ್ತೆ ನೀನು ರಾಣಿ, ನಾನು ರಾಜ ಆಗುತ್ತೇನೆ. ಒಂದೂವರೆ ಲಕ್ಷ ಶರಣರು ಬಂದಿದ್ದಾರೆ. ನಮ್ಮ ಮಗ ತನ್ನ ತಪ್ಪು ತಿದ್ದಿಕೊಂಡಿದ್ದಾನೆ. ನಮ್ಮ ಮಗ ನಮಗೆ ಸಿಗುತ್ತಾನೆ ಎನ್ನುತ್ತಾನೆ. ಆದರೆ ಅಷ್ಟರಲ್ಲಿ ಅವಳು ಶಿವನ ಪಾದ ಸೇರಿರುತ್ತಾಳೆ. ಬಿಜ್ಜಳ ಅವಳ ಅಗಲಿಕೆಯಿಂದ ಕಂಗಾಲಾಗುತ್ತಾನೆ.

ದೃಶ್ಯ-೧೧: ಈ ದೃಶ್ಯವು ಅರಮನೆಯ ಇನ್ನೊಂದು ಭಾಗದಲ್ಲಿ ನಡೆಯುತ್ತದೆ. ಸೋವಿದೇವ, ಮಂಚ್ಯಣಕ್ರಮಿತ ಮತ್ತು ದಾಮೋದರ ಭಟ್ಟ ಸಮಾಲೋಚನೆಯಲ್ಲಿ ತೊಡಗಿರುತ್ತಾರೆ.

ಬಸವಣ್ಣ ಊರು ಬಿಟ್ಟು ಹೋಗಿದ್ದರಿಂದ ಅಂತರ್ಜಾತಿ ವಿವಾಹದಲ್ಲಿ ಪಾಲ್ಗೊಂಡವರನ್ನೆಲ್ಲಾ ಶಿಕ್ಷಿಸಬೇಕೆಂದು ದಾಮೋದರ ಭಟ್ಟ ಹೇಳುತ್ತಾನೆ. ಇದಕ್ಕೆ ಪ್ರತಿಯಾಗಿ ಮಂಚ್ಯಣಕ್ರಮಿತನು ಬಸವಣ್ಣ 'ಅನುಭವ ಮಂಟಪ' ಬಿಟ್ಟು ಹೋದರೂ ಮಹಾಮನೆಯ ಭಂಡಾರ ದಿನಾದಿನಾ ತುಂಬುತ್ತಲೇ ಇದೆ ಎನ್ನುತ್ತಾನೆ. ಅಂತರ್ಜಾತಿ ವಿವಾಹ ನೋಡಿ ಕಲ್ಯಾಣದ ಜನರೆಲ್ಲ ತಮ್ಮ ಕಡೆ ಬಂದು ಉಳಿದ ಕೆಳ ಜಾತಿಯವರೆಲ್ಲ ಬ್ರಾಹ್ಮಣ ಹುಡುಗಿಯರನ್ನು ಎಲ್ಲಿ ಮದುವೆ ಮಾಡಿಕೊಳ್ಳುತ್ತಾರೋ ಎಂಬ ಭಯದಿಂದ ನಮ್ಮ ಕಡೆ ಇದ್ದರು ಆದರೆ ಈಗ ಜಾತಿ-ಮತ ಬೆರೆತು ವರ್ಣಾಶ್ರಮ ಧರ್ಮವನ್ನ ಎತ್ತಿಹಿಡಿದಿದ್ದಾರೆ ಇವರನ್ನು ನಂಬಲಾಗುವುದಿಲ್ಲ ಎನ್ನುತ್ತಾನೆ. ಇವರನ್ನೆಲ್ಲ ಕತ್ತರಿಸಿ ಹಾಕಬೇಕೆನ್ನುತ್ತಾನೆ, ಆಗ ಭಟ್ಟನು ಅಹಿಂಸೆ ಮಹಾಪಾಪ ಎನ್ನುತ್ತಾನೆ. ಮುಂದುವರೆದು ಮಾತನಾಡಿದ ಮಂಚ್ಯಣ ಕ್ರಮಿತನು ಕಾಶ್ಮೀರದ ರಾಜ ಬೌದ್ಧರನ್ನೂ, ತಮಿಳುನಾಡಿನ ಪಾಂಡ್ಯರ ರಾಜ ಸಾವಿರಾರು ಜೈನರನ್ನು ಶೂಲಕ್ಕೆ ಹಾಕಿದ ಹಾಗೆ ಶರಣರನ್ನು ಸೋಮದೇವನು ಶಿಕ್ಷಿಸಬೇಕೆನ್ನುತ್ತಾನೆ.

ಇತ್ತ ಸೋವಿದೇವನು ಶರಣರನ್ನು ಬಗ್ಗು ಬಡಿದ ನಂತರ ಹೊಲೆಮಾದಿಗರಾದರೇನಂತೆ ಆ ಹೆಣ್ಣುಗಳು ನನ್ನ ಪಟ್ಟದ ರಾಣಿಗೆ ಸಮಾನ ಅವರನ್ನು ಕೂಡುತ್ತೇನೆ ಎನ್ನುತ್ತಾನೆ. ಇಲ್ಲಿ ಇವನು ಕೂಡುವಿಕೆಗೆ ಯಾವ ಜಾತಿಯವಳಾದರು ಚಿಂತೆಯಿಲ್ಲ. ಆದರೆ ಅಂತರ್ಜಾತಿ ಮದುವೆ ಮಾಡಿಕೊಳ್ಳುತ್ತಾರೆಂದರೆ ಅವರನ್ನು ಸಂಹರಿಸುತ್ತಾರೆ. ಈ ಸ್ಥಿತಿ ಪ್ರಸ್ತುತ ಸಮಾಜದ ಸ್ಥಿತಿಯೂ ಹೌದು. ಹೀಗಾಗಿ ಸೋಮದೇವ ಮತ್ತು ದಾಮೋದರ ಭಟ್ಟರಿಬ್ಬರು ತಮ್ಮ ದೈನಂದಿನ ಕಾರ್ಯದಲ್ಲಿ ಇನ್ನೂ ಮುಂದೆ ತೊಡಗಬಹುದು. ತಾನು ರಾಜ್ಯದ ಕಾರುಬಾರು ನೋಡಿಕೊಳ್ಳುತ್ತೇನೆ ಎನ್ನುತ್ತಾನೆ. ಸೋವಿದೇವನು ದಾಮೋದರ ಭಟ್ಟನು ಹೊರಡುತ್ತಾರೆ.

ದೃಶ್ಯ-೧೨: ಇಲ್ಲಿ ಶರಣರಾದ ಜಗದೇವ, ಮಲ್ಲಿಬೊಮ್ಮ, ಕಾಳಯ್ಯರು ಅಸ್ತ್ರ ಸಾಧನೆ ಮಾಡುತ್ತಿರುತ್ತಾರೆ. ಹೊರಗಿಂದ ಗುಂಡಣ್ಣ ಕೂಗಿಕೊಳ್ಳುತ್ತಾ ಬರುತ್ತಿದ್ದಾನೆ. ಏದುರುಸಿರು ಬಿಡುತ್ತಾ ಅರಸನ ದಂಡಾಳುಗಳು ಹರಳಯ್ಯನ್ನನ್ನು, ಮಧುವರಸನನ್ನು ಊರ ಚೌಕೆಗೆ ಕರೆದು ಕಾದ ಕಬ್ಬಿಣದಿಂದ ಅವರ ಕಣ್ಣು ಕುಕ್ಕಿ ಕೀಳುತ್ತಾರೆ. ಅಷ್ಟಕ್ಕೆ ಬಿಡದೆ ಇಬ್ಬರನ್ನೂ ಹೊಟ್ಟೆಗೆ ಹಗ್ಗ ಕಟ್ಟಿ ಊರಿನ ಬೀದಿ ಬೀದಿಯಲ್ಲಿ ಎಳೆ ದಾಡಿದ್ದಾರೆ. ಊರಿನ ಕೇರಿ ಕೇರಿಯಲ್ಲಿ ಅವರ ಮೈಕೈ ಮಾಂಡ ತುಂಡುತುಂಡಾಗಿ ಕರುಳು ಹೊರಬರುವ ಹಾಗೆ ಬೇರಾಡಿ ಚೀರಾಡಿ ಅವರಿಬ್ಬರು ಸತ್ತರು ಎನ್ನುತ್ತಾನೆ. ಉರಿನವರೆಲ್ಲ ಇದರಿಂದ ಹೆದರಿ ಮನೆಬಾಗಿಲು ಹಾಕಿಕೊಂಡರು, ಯಾರೂ ಸಹಾಯಕ್ಕೆ ಬರಲಿಲ್ಲ. ಅವರಿಬ್ಬರ ಹೆಣಗಳನ್ನು ಊರಬಾಗಿಲಲ್ಲಿ ಶೂಲಕ್ಕೆ ಏರಿಸಲು ಸಿದ್ಧರಾಗುತ್ತಿದ್ದಾರೆಂದಾಗ ಜಗದೇವನು ನಾವೆಲ್ಲ ಇದನ್ನು ನೋಡಿಕುಳಿತಿದ್ದೀವಲ್ಲಾ ನಾವು ಬರೀ ಹೇಡಿಗಳಲ್ಲ ನಪುಂಸಕರೆನ್ನುತ್ತಾನೆ.

ಇನ್ನು ಮುಂದೆ ಸುಮ್ಮನಿರುವುದು ಬೇಡ ಅರಮನೆಗೆ ನುಗ್ಗಿ ಸೋವಿದೇವನ ಮೇಲೆ ಆಕ್ರಮಣ ಮಾಡಿ ನೆಲಮಾಳಿಗೆಯಿಂದ ಪ್ರವೇಶಿಸಿ ಅವನನ್ನು ಸದೆ ಬಡಿಯೋಣ ಎನ್ನುತ್ತಾನೆ. ಈಗಾಗಲೇ ಬೀದಿಯಲ್ಲಿ ಒಂದು ನರಪಿಳ್ಳೆಯೂ ಇಲ್ಲದಿರುವಾಗ ನಾವು ಹೋದರೆ ನಮ್ಮನ್ನು ಹಿಡಿಯುತ್ತಾರೆನ್ನುತ್ತಾನೆ. ಇಡೀ ಊರೇ ಮಸಣವಾಗಿದೆ. ಎಲ್ಲರೂ ಓಡಿ ಹೋಗುತ್ತಾರೆ. ಜಗದೇವನು ಬಿಜ್ಜಳ ಶಿವಾಲಯದಿಂದ ಹೊರಬರುತ್ತಲೇ ರಾಚ್ಯಾ. . . . ಕಾಳ್ಯಾ. . . . . ಹೊಯ್ಯರೀ, ಹೊಡೆಯಿರಿ ಎಂದು ಅವನನ್ನು ಕತ್ತಿಯಿಂದ ತಿವಿಯಲು ಮುಂದಾಗುತ್ತಾನೆ. ಹೆದರಿದ ಬಿಜ್ಜಳ ತಪ್ಪಿಸಿಕೊಂಡು ಶಿವಾಲಯದೊಳಗೆ ಓಡಿ ಹೋಗುತ್ತಾನೆ. ಜಗದೇವನೂ ಅದರೊಳಗೆ ಪ್ರವೇಶಿಸಲು ಹೋದಾಗ ಮಲ್ಲಿಬೊಮ್ಮನು ಶಿವಾಲಯದೊಳಗೆ ರಕ್ತಪಾತವಾಗಬಾರದೆಂದು ಅವನನ್ನು ತಡೆಯುತ್ತಾನೆ. ಹಾಗೆ ಮಾಡಿದರೆ ಶಿವದ್ರೋಹ ಮಾಡಿದ ಹಾಗೆ. ಒಳಪ್ರವೇಶಿಸುವುದಾದರೆ ಕತ್ತಿ ಹೊರಗಡೆ ಬಿಟ್ಟು ಪ್ರವೇಶಿಸಿ ಅವನನ್ನು ಹೊರಗೆಳೆಯಬೇಕೆನ್ನುತ್ತಾನೆ. ಹಾಗೆ ಪ್ರವೇಶಿಸಿ ಅವನನ್ನು ಹೊರಗೆಳೆಯ ಬೇಕೆನ್ನುತ್ತಾನೆ. ಹಾಗೆ ಪ್ರವೇಶಿಸಿ ಬಿಜ್ಜಳನನ್ನು ಹಿಡಿಯಲು ಎಷ್ಟೇ ಪ್ರಯತ್ನಿಸಿದರು ಅವನು ಇವರ ಕೈಗೆ ಸಿಗುವುದಿಲ್ಲ. ಕೊನೆಗೆ ಬಿಜ್ಜಳನು ಶಿವಲಿಂಗವನ್ನು ಬಿಗಿಯಾಗಿ ತಬ್ಬಿ ತಾನು ತನ್ನ ಹೆಂಡತಿ, ಬಸವಣ್ಣ ಪರಿ ಪರಿಯಾಗಿ ಬೇಡಿ ಶಿವಲಿಂಗವನ್ನು ನಂಬಬೇಕೆಂದರೂ ತಾನು ನಂಬಿರಲಿಲ್ಲ ಆದರೆ ಈಗ ಈ ತರುಣರ ದೆಸೆಯಿಂದ ನಂಬಬೇಕಾಗಿರುವುದು ಪವಾಡವೇ ಸರಿ ಎನ್ನುತ್ತಾನೆ.

ನಂತರ ತನ್ನ ಮನದಾಳದ ಮಾತನ್ನು ಬಸವಣ್ಣನಿಗೆ ತಿಳಿಸುವುದಾದರೆ ತಾನೇ ತಾನಾಗಿ ಹೊರಬರುತ್ತೇನೆ ಆಗ ತಾವು ಕೊಲ್ಲಬಹುದೆನ್ನುತ್ತಾನೆ. ರಾಜನು ಇದಕ್ಕೆ ಒಪ್ಪಿದ ಜಗದೇವ ಅವನಿಗೆ ಶಿವಲಿಂಗದ ಮಾತು ಕೊಟ್ಟು ಹೊರ ಕರೆದುಕೊಂಡು ಬರುತ್ತಾನೆ. ಆದರೆ ಬಿಜ್ಜಳನಿಗೆ ಮರೆವುಂಟಾಗಿ ಅದನ್ನು ಜ್ಞಾಪಿಸಿಕೊಳ್ಳುವುದರೊಳಗಾಗಿ ಮಾತಿಗೆ ತಪ್ಪಿದ ಜಗದೇವನು ಬಿಜ್ಜಳನನ್ನು ಕತ್ತಿಯಿಂದ ತಿವಿದು ಕೊಳ್ಳುತ್ತಾನೆ. ಮಲ್ಲಿಬೊಮ್ಮನಿಗೆ ಇಲ್ಲಿಂದ ಹೊರಡಲು ಹೇಳಿ ತಾನು ಅಲ್ಲೇ ಇರುತ್ತಾನೆ. ಸಾಯುವಾಗ ಬಿಜ್ಜಳನು ತನ್ನನ್ನು ಇರಿದಿದ್ದು ತನ್ನ ಮಗ ಸೋವಿದೇವನೆ ಎಂದು ಹೆಸರಿಡಿದು ಆಕ್ರಂದಿಸುತ್ತಾನೆ. ಇತ್ತ ಜಗದೇವನು ಶಿವಲಿಂಗದೆದುರು ತನಗೆ ತಾನೇ ಕತ್ತಿಯಿಂದ ಇರಿದುಕೊಂಡು ಸಾಯುತ್ತಾನೆ.

ದೃಶ್ಯ-೧೩ ರಲ್ಲಿ ಓಡಿಬಂದ ಜಗದೇವ, ಮಲ್ಲಿಬೊಮ್ಮ, ಕಾಳಯ್ಯ, ರಾಚಪ್ಪರು ಅರಮನೆಯೊಳಗೆ ಕತ್ತಿ ಹಿಡಿದು ನುಗ್ಗುತ್ತಾರೆ. ಅಲ್ಲೆಲ್ಲಾ ಹುಡುಕಾಡಿದರೂ ಸೋವಿದೇವನಾಗಲೀ, ದಾಮೋದರಭಟ್ಟನಾಗಲೀ ಕಾಣದೆ ಅವರು ಓಡಿಹೋಗಿರುವುದನ್ನು ತಿಳಿಯುತ್ತಾರೆ. ಅರಮನೆಯಲ್ಲೇ ಇದ್ದ ರಾಚಪ್ಪನು ಇವರು ಈಗಾಗಲೇ ಓಡಿಹೋಗಿರುವುದನ್ನು 'ಮುದ್ದನ' ಮುಖಾಂತರ ಹೇಳಿ ಕಳಿಸಿದ್ದನು, ಇವರೆಲ್ಲ ಈ ನೆಲಮಾಳಿಗೆಯಿಂದ ಬರುತ್ತಾರೆಂದು ಅಂದುಕೊಂಡಿರಲಿಲ್ಲ ಎನ್ನುತ್ತಾನೆ. ಕ್ರಾಂತಿ ಕ್ರಾಂತಿ ಎಂದು ಆರಚಾಡುವ ಜಗದೇವನಿಗೆ ರಾಚಪ್ಪನು ಇಲ್ಲಿ ರಾಜ ಬಿಜ್ಜಳನು ತನ್ನ ಹೆಂಡತಿ (ರಂಭಾವತಿ) ಸತ್ತದ್ದರಿಂದ ಅವನು ಹುಚ್ಚನಾಗಿದ್ದಾನೆ. ಆದ್ದರಿಂದ ಇವನನ್ನು ಅರಮನೆಯಲ್ಲೇ ಬಿಟ್ಟು ಹೋಗಿದ್ದಾರೆನ್ನುತ್ತಾನೆ. ಎಲ್ಲರೂ ರಾಜ ಬಿಜ್ಜಳನನ್ನು ನೋಡಲು ಹೋಗುತ್ತಾರೆ.

ದೃಶ್ಯ-೧೪ ಈ ದೃಶ್ಯ ರಾಣಿ ರಂಭಾವತಿಯ ಅಂತಃಪುರದಲ್ಲಿ ನಡೆಯುತ್ತದೆ. ರಾಜ ಬಿಜ್ಜಳನು ಅಲ್ಲೇ ಇರುತ್ತಾನೆ. ಮರಿಯಪ್ಪ ಹುಡುಗ ಮಾತ್ರ ಅವನ ಜೊತೆಯದ್ದು ಏಕಾ ಏಕಿ ಕತ್ತಿಹಿಡಿದು ಪ್ರವೇಶಿಸಿದ ಜಗದೇವನನ್ನು ನೋಡಿ ಭಯಗೋಳ್ಳುತ್ತಾನೆ. ಇವರ ಪ್ರವೇಶವನ್ನು ತಿಳಿದ ರಾಜನು ಯಾರಲೇ ನೀವು? ಎಂದು ಕೂಗಿಕೊಳ್ಳುತ್ತಾನೆ ಶಿವಾಲಯದ ಒಳಗಿಂದ ಆಗ ಜಗದೇವನು ಮಹಾರಾಜ ಬಿಜ್ಜಳನಿಗೆ ಜಯವಾಗಲೀ ಎಂದಾಗ ಅವರನ್ನು ಶಿವಾಲಯದ ಒಳಕ್ಕೆ ಕರೆಯುತ್ತಾನೆ. ಮಲ್ಲಿಬೊಮ್ಮ ಮತ್ತು ಜಗದೇವ ತಮ್ಮ ಕಾಲು ಕೆಸರಾಗಿದ್ದರಿಮದ ಶಿವಾಲಯ ಪ್ರವೇಶಿಸಲು ಹಿಂಜರಿಯುತ್ತಾರೆ. ಆಗ ರಾಜನೇ ಈ ಶಿವಾಲಯ ಪ್ರವೇಶಿಸಲು ಹಿಂಜರಿಯುತ್ತಾರೆ. ಆಗ ರಾಜನೇ ಈ ಶಿವಾಲಯಕ್ಕೆ ಪೂಜೆ ಸಲ್ಲುತ್ತಿಲ್ಲ ಸಂಕೋಚವಿಲ್ಲದೆ ಬನ್ನಿ ಎನ್ನುತ್ತಾನೆ. ಅವರು ಬಾರದಿದ್ದಾಗ ರಾಜನು ನಾನು ಬೆಳಕಿಗೆ ಬರುವುದಿಲ್ಲ ನನಗೆ ಕತ್ತಲೇ ತಂಪಾಗಿದೆ ಎನ್ನುತ್ತಾ ತನ್ನ ಜೀವನದ ಬೆಳಕು ಹಾರಿಹೋಗಿರುವುದನ್ನು ತಿಳಿಸುತ್ತಾನೆ. 'ಹೇಳು' ಇಲ್ಲ 'ಹೊರಡು' ಎನ್ನುತ್ತಾನೆ.

ಮಾತು ಮುಂದುವರಿಸಿದ ಜಗದೇವ ತಾವು ಕಪ್ಪಡಿಸಂಗಮದಿಂದ ಬಸವಣ್ಣ ಹೇಳಿಕಳಿಸಿದ್ದರಿಂದ ಬಂದಿದ್ದೇವೆ ಎಂದಾಗ. ಬಿಜ್ಜಳನು ಕತ್ತಲ ಶಿವಾಲಯದಿಂದ ಹೊರಬರುತ್ತಾನೆ.

ದೃಶ್ಯ-೧೫ ಇದು ಕಪ್ಪಡಿಸಂಗಮದಲ್ಲಿನ ದೃಶ್ಯವಾಗಿದೆ. ಬಸವಣ್ಣ, ಮಲ್ಲಿಬೊಮ್ಮ, ಕಾಳಯ್ಯರು ನಡೆದ ಘಟನೆಯನ್ನು ವಿವರಿಸುತ್ತಿರುತ್ತಾರೆ. ಬಸವಣ್ಣನ ಹೆಸರು ಹೇಳಿದ್ದರಿಂದ ಬಿಜ್ಜಳ ಹೊರಗೆ ಬಂದ ಆಗ ಅವನನ್ನು ಜಗದೇವ ಕೊಂದನು ಎಂದು ಬಸವಣ್ಣನಿಗೆ ಕಾಳಯ್ಯ ಹೇಳುತ್ತಾನೆ. ಇದೆಲ್ಲ ಶಿವನಿಚ್ಛೆ ಎಂದು ಬಸವಣ್ಣನು ಅವರನ್ನು ಸಮಾಧಾನ ಮಾಡುತ್ತಾನೆ.

ಮಲ್ಲಿಬೊಮ್ಮ ಮತ್ತು ಕಾಳಯ್ಯ ಹೊರಟ ನಂತರ ಇದರಿಂದ ನೊಂದ ಬಸವಣ್ಣ ಯಾರ ಹೆಸರು? ಯಾರ ರೂಪ? ಯಾರ ಗಾಯ? ಯಾರ ನೆತ್ತರು? ಈ ಬಿಜ್ಜಳನ ಹೆಣಕ್ಕೆ ತಾನೇ ಕಾರಣನಾಗಿದ್ದೇನೆ. ಪ್ರಭುದೇವರ ಕೊನೆ ಮೆರವಣಿಗೆ ಇದು. ತನ್ನನ್ನು ನಿನ್ನ ಜ್ಯೋತಿಯೊಳಗೆ ಒಂದಾಗಿಸೆಂದು ಶಿವನಲ್ಲಿ ಬೇಡಿಕೊಳ್ಳುತ್ತಾನೆ.

ದೃಶ್ಯ-೧೬ ಈ ದೃಶ್ಯದಲ್ಲಿ ಸೋವಿದೇವನು ಐದಾರ ಅಂಗರಕ್ಷರೊಡನೆ ಇರುತ್ತಾನೆ. ಅಲ್ಲಿಗೆ ಓಡಿಬಂದ ದೂತನು ಕಲ್ಯಾಣದಲ್ಲಿ ಜನರು ಪಿಶಾಚಿಗಳ ಹಾಗೆ ಓಡಾಡುತ್ತಿದ್ದಾರೆ ಅವರನ್ನು ಹತೋಟಿಗೆ ತರಲು ರಾಜ ಬರಬೇಕೆಂದು ಕೇಳಿಕೊಳ್ಳುತ್ತಾನೆ. ಇನ್ನೊಬ್ಬ ದೂತನು ಇಲ್ಲಿ ಊರನ್ನು ಕಾವಲು ಕಾಯುವ ಸೈನಿಕರೆ ಊರನ್ನು ಸುಲಿಗೆ ಮಾಡುತ್ತಿದ್ದಾರೆ. ಎಲ್ಲಿ ನೋಡಿದರು ಕೊಲೆ, ಸುಲಿಗೆ ದರೋಡೆ, ಬೆಂಕಿಯ ಆಹಾಕಾರವೆದ್ದು ಶರಣರೆಲ್ಲ ಕಲ್ಯಾಣ ಬಿಟ್ಟು ಓಡಿ ಹೋಗುತ್ತಿದ್ದಾರೆ. ಒಂದು ಗುಂಪು ಕಾಡಿಗೆ ಹೋದರೆ, ಮತ್ತೊಂದು ಗುಂಪು ಆಂದ್ರದತ್ತ ಹೋಗುತ್ತದೆ ಎನ್ನುತ್ತಾನೆ. ಆ ಸಮಯಕ್ಕೆ ದಾಮೋದರ ಭಟ್ಟನು ಪ್ರವೇಶಿಸಿ ಸೋವಿದೇವನಿಗೆ ತಾವು ಕಲ್ಯಾಣ ಬಿಟ್ಟು ಬರಬಾರದಿತ್ತು, ಈಗ ಇನ್ನೂ ಕೈಮೀರಿಲ್ಲ ಪುನಃ ಹಿಂತಿರುಗಿ ಹೊಸ ರಾಜ್ಯ ಕಟ್ಟೋಣ ಎಂದು ಸಲಹೆ ನೀಡಿದಾಗ ಇದನ್ನು ಸಹಿಸದ ಸೋವಿದೇವನು ಭಟ್ಟನ ಬಾಯಿ ಮುಚ್ಚಿಸಲು ಸೈನಿಕರಿಗೆ ಹೇಳಿದಾಗ ಅವರು ಇವನನ್ನು ಕತ್ತಿ ಇರಿದು ಕೊಂದೇ ಬಿರುತ್ತಾರೆ. ಇದರಿಂದ ಕಂಗಾಲಾದ ರಾಜನು ತಾನು ಬಾಯಿ ಮುಚ್ಚಿಸಲು ಹೇಳಿದರೆ ಕೊಂದೇ ಬಿಡುವುದೇನೋ ಎನ್ನುತ್ತಾನೆ. ಪುನಃ ಇದೆಲ್ಲ ರಾಜಕೀಯದಲ್ಲಿ ಸರ್ವೇಸಾಮಾನ್ಯ ಎನ್ನುತ್ತಾನೆ.

**ಉಪಸಂಹಾರ :**

ಇತ್ತ ಊರು ಬಿಟ್ಟು ಹೋಗುವವರನ್ನ ಹೆಣ್ಣು-ಗಂಡು-ಮಗು ಎಂದು ನೋಡದೆ ಸಿಕ್ಕಲ್ಲಿ ಕತ್ತರಿಸಿ. ಬೇಟೆ ನಾಯಿಗಳನ್ನು ಬಿಡಿ ಎನ್ನುತ್ತಾನೆ. ಅಷ್ಟೊತ್ತಿಗೆ ಹೆಂಗಸರು ಮಕ್ಕಳ ಚೀರಾಟವುಂಟಾಗುತ್ತದೆ. ಸೋವಿದೇವನ ಅಣ್ಣಂದಿರು ಇವನ ಮೇಲೆ ದಂಡೆತ್ತಿ ಬರುತ್ತಿರುತ್ತಾರೆ. ಅವರು ದೇಶ ದ್ರೋಹಿಗಳು ತನ್ನ ತಂದೆ ಬಿಜ್ಜಳನ ಕೊಲೆಯಲ್ಲಿ ಇವರ ಕೈವಾಡವೂ ಇದೆ ಅವರು ಸಿಕ್ಕಲ್ಲಿ ಕೊಂದು ಹಾಕಿ ಎಂದು ಸೋವಿದೇವ ತನ್ನ ಸೈನಿಕರಿಗೆ ಹೇಳುತ್ತಾನೆ.

ಇನ್ನು ಮುಂದೆ ಪ್ರಜೆಗಳು ರಾಜನ ಮೇಲೆ ಮಕ್ಕಳ ಮೇಲೆ ಪ್ರೀತಿ ಇಟ್ಟ ಹಾಗೆ ಇಡಬೇಕು. ಏಕೆಂದರೆ ರಾಜನೇ ತಂದೆ. ರಾಜ ಹೇಳಿದ ಹಾಗೆ ಅವರು ಕೇಳಿಕೊಂಡಿರಬೇಕು. ರಾಜನ ವಿರುದ್ಧ ರಾಜಮನೆತನದ ವಿರುದ್ಧ, ಅಧಿಕಾರಿಗಳ ವಿರುದ್ಧ ಯಾರಾದರು ಆಡಿಕೊಂಡರೆ ಅವರ ನಾಲಿಗೆ ಸೀಳಿ ಹಾಕಲಾಗುತ್ತದೆ, ಶರಣಾರು, ನಾಸ್ತಿಕರು, ಹೊರನಾಡಿನವರು ಹಾಗೂ ಹೊಸ ವಿಚಾರಗಳನ್ನು ಪ್ರಚಾರ ಮಾಡುವವರನ್ನ ರಾಜ್ಯದಿಂದ ಓಡಿಸಬೇಕು. ಶೂದ್ರರು, ಸ್ತ್ರೀಯರು ಪರಂಪರೆಗೆ ತಲೆಬಾಗಿ, ಅದರ ಮಿತಿಯಲ್ಲೇ ಬದುಕಬೇಕು ಇದನ್ನು ಮೀರಿದರೆ ಅವರ ಗತಿ ನಾಯಿಗಿಂತ ಕಡಿಮೆಯಾಗುತ್ತದೆ. ಪ್ರತಿಯೊಬ್ಬ ಗಂಡಸು ಸನಾತನಧರ್ಮ, ವರ್ಣವ್ಯವಸ್ಥೆಗಾಗಿ, ರಾಜನ ರಕ್ಷಣೆಗಾಗಿ ಪ್ರಾಣಕೊಡಲಿಕ್ಕೂ ಸಿದ್ಧರಿರಬೇಕು ಏಕೆಂದರೆ ರಾಜಾ ಪ್ರತ್ಯಕ್ಷ ದೇವತಾ! ಎನ್ನುತ್ತಾನೆ.

ಅಷ್ಟರಲ್ಲಿ ಸೈನಿಕರೆಲ್ಲ ಪ್ರಜೆಗಳನ್ನು ಇರಿಯಲು ಅಟ್ಟಿಸಿಕೊಂಡು ಬರುತ್ತಿರುತ್ತಾರೆ. ಅದೇ ಸಮಯಕ್ಕೆ ರಾಜನೂ ಕೈಬೀಸಿಕೊಂಡು ತನ್ನ ಮಾತುಗಳನ್ನು ಮುಂದುವರೆಸುತ್ತಲೇ ಇರುತ್ತಾನೆ. ಇವನ ಆ ಸ್ಥಿತಿಯಲ್ಲಿಯೇ ಮಂಚ್ಯಕ್ರಮಿತು ಮತ್ತು ಮೂವರು ಬ್ರಾಹ್ಮಣರು ಬಂದು ಅವನನ್ನು ಸಿಂಹಾಸನದ ಮೇಲೆ ಕೂರಿಸಿ ಮಂತ್ರ ಘೋಷದಿಂದ ಪಟ್ಟಾಭಿಷೇಕ ಮಾಡತೊಡಗುತ್ತಾರೆ. ಇದೊಂದು ರೀತಿಯ ಆಭಾಸದ ಅಸಭ್ಯದ ದೃಶ್ಯವಾಗಿ ಕಂಡುಬರುತ್ತದೆ.

**ಗ್ರಂಥ ಋಣ :**

ಗಿರೀಶ ಕಾರ್ನಾಡ, ತಲೆದಂಡ, ಮನೋಹರ ಗ್ರಂಥಮಾಲಾ, ಧಾರವಾಡ, ೨೦೧೦

ಶೇಷಗಿರಿರಾವ್ ಎಲ್. ಎಸ್, ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಮಕಿತ ಪುಸ್ತಕ, ಬೆಮಗಳೂರು, ೨೦೧೫.